

ಸ್ಥಾಪನೆ : ೧೮೬೭ **1867 - 68** ಸಂಸ್ಥಾಪಕರು

## ಪ್ರಾಚೀನ ಶಿಕ್ಷಣ ಪತ್ರಿಕೆಯು

## ಶತಮಾನೋತ್ತರ ಬೆಳ್ಳಿ ಹಬ್ಬದ

### ಪುಸ್ತಕ ಪ್ರದರ್ಶನ ೧೯೯೨

ಡೆ. ಚೆನ್ನಬಸಪ್ಪನವರು

(೧೮೩೩-೧೮೮೧)

ಶತಮಾನೋತ್ತರ ಬೆಳ್ಳಿ ಹಬ್ಬ

(ಏಪ್ರಿಲ್ ೧೯೯೨ ರಿಂದ)

ವರ್ಷ *1867-68*

೫ ನೆಯ ಸಂಪುಟ

# ಶಾಲಾ ಪತ್ರಿಕೆ



ಶಿಕ್ಷಣ ಸಂತಸ

**ಸರಕಾರಿ ಉಪಾಧ್ಯಾಯರ ತರಬೇತಿ ವಿದ್ಯಾಲಯ**

ಡೆಪ್ಯುಟಿ ಚನ್ನಬಸಪ್ಪ ವೃತ್ತ, ರೋಡ್ ರಸ್ತೆ, ಧಾರವಾಡ

Office of the Educational Inspector, Southern Division

~~113~~

~~105~~
~~106~~

# ಶಾಲಾಪತ್ರಿಕೆ.

ಪುಸ್ತಕ ೩ ಸಂಚಿಕೆ ೧

ಬೆಳಗಾವಿ, ಮಾಹೆ ಏಪ್ರೀಲ ೧೮೬೮

## *Education.*

## ಶಿಕ್ಷಣವು.

### ಪುನರಾವರ್ತನವು.

ಕಲಿಸಿದ ವಿಷಯವನ್ನು ಪುನಃ ಆವೃತ್ತಿ ಮಾಡಿಸುವದೇ ಪುನರಾವರ್ತನವು. ಪುನರಾವರ್ತನವು ಶಿಕ್ಷಣದ ಮುಖ್ಯ ಸೂತ್ರವಾಗಿರುತ್ತದೆ. ಆದರೆ ಪುನರಾವರ್ತನಕ್ರಮವು ನಮ್ಮ ಶಾಲೆಗಳಲ್ಲಿ ನಡೆಯತಕ್ಕ ಮೇರೆಗೆ ನಡೆಯುವದಿಲ್ಲೆಂದು ತೋರಿ ಖೇದಪಡುತ್ತೇವೆ. ಈ ವಿಷಯವನ್ನು ಕುರಿತು ಮಿಸ್ ಎಜವರ್ಥ ಎಂಬವರು ಹೇಳುವದೇನಂದರೆ.

ಪುನರಾವರ್ತನದಿಂದ ಎಲ್ಲ ಕೆಲಸವು ಸುಲಭವಾಗ

೧. ಅಭ್ಯಾಸದಿಂದ ವಿಚಾರಮಾಡುವ ಶ್ರಮವು ಕಡಿಮೆಯಾಗುತ್ತದೆ. ನಾವು ನಮ್ಮ ಮನಸ್ಸಿಗೆ ಅಭ್ಯಾಸಿಸಿದ್ದ. ಬೆಯಸುಕೊಳುವ ಬಾರದೆಂಬದಾಗಿ ಪುನರಾವರ್ತನದಿಂದ ಬಂದು

ಸಾಕಷ್ಟು ಸುಲಭವಾಗುವ ಮಟ್ಟಿಗೂ ಮಾರ್ಗಪ್ರತೀಕ್ಷೆಯ
ಕ್ಷೆ ಮಾಡಬೇಕು. ಇದನಂತರ ಮುಂದೆ ಹೊಸ ವಿಷಯ
ಗಳನ್ನು ಕಲಿಯ ಪ್ರಯತ್ನಿಸಬೇಕು. ಪುನರಾವರ್ತನದಿಂದ
ಉಂಟಾಗುವ ಲಾಭವು ನರ್ತನ ಮೊದಲಾದ ಶಾರೀರಕ್ರಮ
ಗಳಲ್ಲಿ ಬಹು ಪ್ರತ್ಯಕ್ಷವಾಗಿ ಕಾಣುತ್ತದೆ. ಪಾಂಡಿತ್ಯ, ಅಥ-
ವಾ ಹಾಡುಗೆ ಬರೆಹ ಇವುಗಳಲ್ಲಿ ಹೊಸ ವಿಷಯಗಳನ್ನು ಕಲಿ-
ಯುವಾಗ ಯಾವ ನರಗಳಿಗೆ ಚಲನೆ ಕೊಡಬೇಕೆಂದು ಮೊದ-
ಲಿಗೆ ತಿಳಿಯುವದಿಲ್ಲ. ಇದೇ ಮೇರೆಗೆ ಯಾವ ನರಗಳಿಗೆ ವಿ-
ಶ್ರಾಂತಿಯು ತಕ್ಕದ್ದಾಗಿದೆ ಎಂಬುದು ಸಹ ಮೊದಲಿಗೆ ತಿಳಿಯು
ವದು ಕಷ್ಟವಾಗಿರುತ್ತದೆ. ಈ ಅಭ್ಯಾಸಿಗರು ಸಾಮಾನ್ಯವಾಗಿ ತಮ್ಮ
ಸ್ವಾಧೀನದಲ್ಲಿರುವ ನರಗಳನ್ನು ಸಾಧಾರಣವಾಗಿ ಮೊದಲಲ್ಲಿ ಪ್ರ
ಯೋಗಿಸುತ್ತಾರೆ, ಆದರೆ ಅವರು ಕಲಿಯುವದರಲ್ಲಿ ಅಂಥಾ
ನರಗಳ ಪ್ರಯೋಗವು ಬಹಳ ವೇಳೆ ಎಷ್ಟು ಮಾತ್ರವೂ
ಬೇಕಾಗಿರುವದಿಲ್ಲ. ಅಭ್ಯಾಸದಿಂದ ವಶಮಾಡಿಕೊಳ್ಳುವ ಮ-
ಟ್ಟಿಗೂ ಅತಿ ಸುಲಭವಾದ ಸಂಗತಿ ಸಹ ಬಹು ಕಠಿಣವಾಗಿ ಕಾ-
ಣುತ್ತದೆ. ರೂಢಿಯಿಲ್ಲದ್ದರಿಂದ ನಂಮ ಪಾದಸ್ನಾಯುಗಳು
ನಮ್ಮ ಇಚ್ಛಾನುರೋಧವಾಗಿ ಆಗುವದಿಲ್ಲೆಂದು ನಮಗೆ ತಿಳಿ
ಯುತ್ತದೆ. ಆದದರಿಂದ ಅವಶ್ಯವಿದ್ದದಕ್ಕಿಂತ ಹೆಚ್ಚು

ಮೆಯನ್ನು ತೆಗೆದುಕೊಳ್ಳುತ್ತೇವೆ. ಇಲ್ಲಿ ಸಾಮರ್ಥ್ಯದ ಕೆಲಸ ವಿಲ್ಲ, ನೀನು ಅಷ್ಟು ಬಲ ತೋರಿಸುವ ಪ್ರಯೋಜನವೇನು ಇಲ್ಲ, ನೀನು ಇಷ್ಟು ಕಷ್ಟಪಡುವ ಅಗತ್ಯವಿಲ್ಲ, ಈ ಮೇರೆಗೆ ನರ್ತನ ಶಿಕ್ಷಕರು ತಮ್ಮ ವಿದ್ಯಾರ್ಥಿಗಳು ಆರಂಭದಲ್ಲಿ ಬಹು ಕಷ್ಟಪಟ್ಟು ಅಷ್ಟ ತಿಷ್ಟ ಕುಣಿಯುವ ಯತ್ನ ಮಾಡುತ್ತಿರುವಾಗ ಹೇಳುತ್ತಾರೆ.

ಇದೇ ಮೇರೆಗೆ ಮಾನಸಿಕ ಕ್ಷೇತ್ರಗಳಲ್ಲಿ ಸಹ ನಮಗೆ ಹೊಸವಾಗಿದ್ದ ವಿಷಯಗಳನ್ನು ಕಲಿಯುವಾಗ ಸಾಧಾರಣವಾಗಿ ಅಗತ್ಯವಾಗಿದ್ದದಕ್ಕಿಂತ ಹೆಚ್ಚು ಶ್ರಮ ತೆಗೆದುಕೊಳ್ಳುತ್ತೇವೆ. ಅದರಿಂದ ಯೇನು ಲಾಭ ಪಡಕೊಳ್ಳದೆ ನಾವು ಬೇಗ ದಣಿಯುತ್ತೇವೆ. ಹುಡುಗರಿಗಂತೂ ಅನೇಕ ವಿಷಯಗಳಲ್ಲಿ ಹೊಸವಾಗಿದ್ದವರಿಂದ ಅವರು ಅನಾವಶ್ಯಕವಾದ ಶ್ರಮೆಗಳಿಂದ ಬಹು ಬೇಗ ದಣಿಯುತ್ತಾರೆ. ಇಂಥಾ ಪ್ರಸಂಗಗಳಲ್ಲಿ. ಶಿಕ್ಷಕನು ಬೇರೆ ವಿಷಯಗಳನ್ನು ಕುರಿತು ಸಂಭಾಷಣೆಯನ್ನು ಉಪಕ್ರಮಿಸಿ, ಮೊದಲಿನ ವಿಷಯದ ಚಿಂತನೆಯಲ್ಲಿ ಆಸಕ್ತವಾದ ಬಾಲಕರ ಮನಸ್ಸನ್ನು ವಿಶ್ರಾಂತಿ ಪಡಿಸಬೇಕು ಶಿಕ್ಷಕನು ತನ್ನ ಮುಖಚರ್ಯೆಯಲ್ಲಿಯೂ, ನಡತೆಯಲ್ಲಿಯೂ ಯಿಷ್ಟು ಮಾತ್ರವೂ ಪ್ರಯಾಸವನ್ನು ತೋರಿಸದೆ,

ತನ್ನಲ್ಲಿ ಪ್ರೀತಿಯ, ಅಥವಾ ತಿರಸ್ಕಾರದ ಭಯವನ್ನು ಬಾ-
ಲಕರು ಮನಸ್ಸಿನಿಂದ ಪರಿಹರಿಸಬಹುದು. ಅವನು ಹೀಗೆ ಬೋ-
ಧಿಸಬಹುದು—ನಿಮ್ಮ ಮುಂದಿರುವ ವಿಷಯವು ಕೇವಲ ಅ-
ತುರಪಿದ ಪ್ರಶ್ನಾರ್ಥದ್ದೇನೂ ಅಲ್ಲ, ನೀನು ಮೊದಲಿಗೆ ಮಾ-
ಡಯತ್ನದಿಂದ ನೀನು ಆ ವಿಷಯವನ್ನು ತಿಳಿದುಕೊಳ್ಳಬ-
ಥ ನಿನಗೆ ಶಕ್ತಿ ಇದ್ದರೆ, ನಿನ್ನ ಮಿತ್ರರುಗಳಲ್ಲಿ ನಿನ್ನ ಯೋಗ್ಯತೆಗೆ
ಹಾನಿ ಬರಲಾರದು; ಪ್ರಯತ್ನ ಇಲ್ಲದುದರಿಂದ ನೀನು ಹಗುರವಿದ್ದ-
ರೆ ಒಂದೇಸಲ ನಿನ್ನ ನಾಶ ಮಾಡಿಕೊಳ್ಳುತಿ; ನೀನು ಹುಡುಕ
ಯವನ್ನು ಹುಡುಕು, ತಿಳಿದುಕೊಂಡರೂ, ಸಾಕ್ಷಿ ತಿಳಿದು-
ಕೊಂಡರೂ ಅದರಲ್ಲಿ ಭೇದವೇನೂ ಇಲ್ಲ. ಇಂಥಾ ವಿಚಾರ-
ಗಳಿಂದ ಆ ಬಾಲಕನ ಮನಸ್ಸಿನ ಚಟಪಟಿಕೆಯನ್ನು ಶಾಂ-
ತಪಡಿಸಿ, ತನ್ನ ವಿಷಯವಾಗಿ ಅವನ ಮನಸ್ಸಿನಲ್ಲಿ ಉಂಟಾ-
ದ ತಿರಸ್ಕಾರವನ್ನು ಹಿಂಮೆಟ್ಟಿಸಬಹುದು.

ಬಾಲಕರು ಕಲಿತ ವಿಷಯವು ಅವರಿಗೆ ಚನ್ನಾಗಿ ತಿಳಿಯುವಂತೆ
ಕೆಂಬ ಉದ್ದೇಶದಿಂದ ಮುಖ್ಯವಾಗಿ ಮನನಾವರ್ತನವನ್ನು ಮಾ-
ಡಬೇಕು: ಆದರೆ ವಿಚಾರಶಕ್ತಿಗೆ ಚಲನೆ ಕೊಡುವದನ್ನು-
ಯಬಿಟ್ಟು ಮಾತ್ರವೂ ಆಲೋಚಿಸದೆ ಬಾಲಕರ ಸ್ಮರಣಶ-
ಕ್ತಿಗಳ ಭಾರವನ್ನು ಮಾತ್ರ ಸಂಗ್ರಹಿಸುವ ಉದ್ದೇಶವಾಗಿ-

ನರಾವರ್ತನವನ್ನು ಮಾಡಿಸುವದು ವಾಡಿಕೆಯಾಗಿದೆ. ಬಾಲಕರಿಗೆ ಸ್ತೋತ್ರಪಾಠವು ಅವರಿಗೆ ಮೊದಲನ ಪಾಠವಾಗಿತ್ತು. ಆದ್ದರಿಂದ, ಶಿಕ್ಷಕನು ಎಳೆತನದಲ್ಲಿ ಆ ಪಾಠವನ್ನು ಕಲಿಸಿಕೊಡುವಲ್ಲಿ ಹೊಸ ಯುಕ್ತಿಯನ್ನು ಯೋಜಿಸಬೇಕು. ಹೀಗೆ ಮಾಡುವದರಿಂದ ಕಲಿತದ್ದನ್ನೇ ಪುನಃ ಪುನಃ ಕಲಿಯುವ ಬೇಸರಿಕೆಯುಂಟಾಗದೆ ಅಪೂರ್ವ ಹೊಸ ಸ್ವಾರಸ್ಯವು ಉಂಟಾಗಿ ಬಾಲಕರ ಮನಸ್ಸಿಗೆ ಸುಬೋಧವಾಗುವದು.

ಮಿಸ್ ಎಜವರ್ಥ-ಳು ಹೇಳುವದೇನಂದರೆ.

ಯಾವದೊಂದು ಹೊಸ ಪಾಠ ಕಲಿಸುವಾಗ ಅದರಲ್ಲಿಯ ಹೊಸವಾದ ಶಬ್ದಗಳೂ, ವಿಚಾರಗಳೂ ವಿದ್ಯಾರ್ಥಿಗಳಿಗೆ ಪಾಠಾಂತರವಾಗುವ ಮಟ್ಟಿಗೂ ಅವುಗಳನ್ನು ಪುನಃ ಪುನಃ ಉಚ್ಚರಿಸುವಲ್ಲಿ ಬೋಧಕನು ಬೇಸರಪಡಬಾರದು. ಆದಾಗ್ಯೂ ವಿದ್ಯಾರ್ಥಿಗಳ ಪ್ರವೃತ್ತಿಗೂ, ಸ್ವಭಾವಕ್ಕೂ ಅನುರೂಪವಾಗುವ ಹಾಗೆ ಅವಶ್ಯವಿದ್ದಷ್ಟೇ ಪುನರಾವರ್ತನ ಮಾಡುವದು ಉತ್ತಮ. ನೀರಸ ವ್ಯತ್ಯಾಸ ಮಾತ್ರ ಮಾಡಬೇಕು. ಇಲ್ಲದಿದ್ದರೆ ವಿದ್ಯಾರ್ಥಿಗಳ ಲಕ್ಷ್ಯವನ್ನು ದೃಢಪಡಿಸುವದಕ್ಕೆ ಬದಲಾಗಿ ಅದನ್ನು ನಾಶಪಡಿಸುವನು. ಒಂದು ಪಾಠವು ಅವರಿಗೆ ಒಂದು ಸಲ ಕಲಿಸಿದನಂತರ ಅದನ್ನು ಇನ್ನೂ ವಿಶೇಷ ಸ್ಪಷ್ಟಪಡಿ-

ಸುವ ಬಗ್ಗೆ ಯತ್ನ ಮಾಡಬಾರದು. ಒಂದು ವಿಷಯವು ಪೂ
ರ್ಣವಾಗಿ ತಿಳಿದನಂತರ ಅದರ ಸಂಬಂಧದ ಉದಾಹರಣೆಗ
ಳಿಂದ ಹೆಚ್ಚಾಗಿ ಪ್ರಯೋಜನವಿಲ್ಲ. ಶಿಕ್ಷಕನು ಹೇಳಿದ್ದು ವಿದ್ಯಾ
ರ್ಥಿಗಳಿಗೆ ಯಾವಾಗ ಚನ್ನಾಗಿ ಬೋಧವಾಗುತ್ತದೋ ಆಗ ಅವ
ವನ್ನು ತಿಳಿದುಕೊಳ್ಳುವದು ಶಿಕ್ಷಣದಲ್ಲಿ ಬಹು ಕಠಿಣವಾದ ಸಂ
ಗತಿಯಾಗಿರುತ್ತದೆ. ಅಂಥಾ ಸಮಯವನ್ನು ಸೂಕ್ಷ್ಮದೃಷ್ಟಿ
ಯಿಂದ ಗೊತ್ತು ಹಿಡಿದು ಅದರ ನಂತರ ಪುನರಾವರ್ತನವನ್ನು
ನಿಲ್ಲಿಸಬೇಕು. ಸೂಕ್ಷ್ಮದೃಷ್ಟಿಯುಳ್ಳ ಬೋಧಕನಿಗೆ ವಿದ್ಯಾರ್ಥಿ
ಗಳ ಮುಖಚರ್ಯೆ, ಕಣ್ಣು, ಧ್ವನಿ, ನಡತೆಗಳಿಂದ ತಾನು-
ಹೇಳುವದು ಅವರಿಗೆ ತಿಳಿಯಿತೆಂದು ಗೊತ್ತು ಹತ್ತಬಹುದು
ಆದರೆ ತನ್ನ ಸ್ವಂತ ವಿಚಾರಗಳಲ್ಲಿ ಮುಳುಗಿಹೋದ ಶಿಕ್ಷ
ಕನು ವಿದ್ಯಾರ್ಥಿಗಳ ಮುಖಗಳನ್ನು ನೋಡಿ ಅವರ ಮನೋ
ಗತವನ್ನು ತಿಳಿದುಕೊಳ್ಳಲೆತ್ನಿಸುವದಿಲ್ಲ. ಅವನು ವಿದ್ಯಾರ್ಥಿ
ಗಳ ಸ್ಥಿತಿಯನ್ನು ಲಕ್ಷಿಸದೆ ಕುಡುತನು ಹಗ್ಗ ಹರಿಸಿದ ಹಾಗೆ-
ತಾನು ಮೆಚ್ಚಿಕೊಂಡ ಆಲೋಚನೆಗಳನ್ನೇ ಬಡಬಡಿಸು-
ತ್ತ ಹೋಗುವನು. ಅದರಿಂದ ವಿದ್ಯಾರ್ಥಿಗಳ ಚುರುಕುತ-
ನವೂ, ಲಕ್ಷ್ಯವೂ ನಷ್ಟವಾಗಿ ಆವರು ಕೇವಲ ಆಲಸ್ಯದ
ಮೂರ್ತಿಗಳಾಗಿ ಕಾಣಿಸುವರು. ತೀವ್ರಬುದ್ಧಿಯುಳ್ಳವ

...ಉ ತಮ್ಮ ಶಿಕ್ಷಕನು ಹೇಳಿದ್ದನ್ನೇ ಪುನಃ ಪುನಃ ಹೇಳುತ್ತಾ-
...ಂದು ನೋಡಿ ಅವನ ಬೋಧನೆ ಯನ್ನು ಚಿಂತಿಸದೆ ತ-
...ನ್ನ ಮನಸ್ಸಿಗೆ ಬಂದ ಸಂಗತಿಯನ್ನು ಕುರಿತು ಆಲೋಚಿಸುತ್ತ
...ರುತ್ತಾನೆ. ಅಷ್ಟರಲ್ಲಿ ಶಿಕ್ಷಕನು ಹೇಳಿದಂತಹವಾದರೂ
ವಿಶೇಷವಾದ ಸಂಗತಿ ಯನ್ನು ಕೇಳಿಕೊಳ್ಳುವಲ್ಲಿ ತಪ್ಪಿದರೆ,
ಅವನು ಇನ್ನೊಮ್ಮೆ ಹ್ಯಾಗಾದರೂ ಹೇಳುವನೆಂದು ಮಾ-
...ರ್ಗಪ್ರತೀಕ್ಷೆ ಮಾಡುವನು. ಶಿಕ್ಷಕನು ಪುನಃ ಅದನ್ನು ಉಚ್ಚ-
...ರಿಸದಿದ್ದರೆ, ನಮುವೇ ಪ್ರಶ್ನ ಮಾಡಿ ಅದನ್ನು ತಿಳಿದುಕೊಳ್ಳು-
...ವನು. ಈ ಮೇರೆಗೆ ಶಿಕ್ಷಕನನ್ನು ತನ್ನ ವಶದಲ್ಲಿ ನಡಿಸಿ
...ಕೊಳ್ಳುವನು. ಇಂಥಾ ಹುಡುಗರಿಗೆ ತಕ್ಕ ಉಪಾಯವೇನಂ
...ದರೆ ತಾವು ಹೇಳುವ ವಿಷಯವನ್ನು ತಕ್ಕಮಟ್ಟಿಗೆ ಬೇಸರಿಕೆ-
...ಯಿಲ್ಲದ ಹಾಗೆ ತಿಳಿಸಿಕೊಟ್ಟ ನಂತರ ಅದನ್ನು ಕೇಳಿಕೊಳ್ಳುವ-
...ಯಾರು ದುರ್ಲಕ್ಷ್ಯ ಮಾಡಿದರೆಂದು ತೋರುವದೋ, -
...ಅವರಿಗೆ ಪುನಃ ಹೇಳದೆ ಪ್ರಶ್ನ ಮಾಡಬೇಕು. ಹೀಗೆ ಒಂದೆರಡು
...ಸಾರಿ ಆದಮೇಲೆ ಅವರು ಪುನಃ ದುರ್ಲಕ್ಷ್ಯ ಮಾಡಲಿಕ್ಕಿ-

*Shabdamandarpana*

# ಶಬ್ದಮಣಿದರ್ಪಣಂ

ಏಕದ್ವಿತ್ರ್ಯಾದಿಸಮಾ
ಸಾಕೃತಿಯಿಂ ಪ್ರತ್ಯಯಾಂತದಿಂದಱುಷ್ಟವ.
ಪ್ರಾಣಿಯನತ್ತಮನಿಕ
ವಾಕ್ಕಾಳ್ಬಹುಳ್ಗಳಿಂ ವಿತಳ್ಗಳಿಕೆಲಿಂಗಂ ॥೧೧॥

ಅರ್ಥ- ಏಕ, ದ್ವಿ, ತ್ರಿ, ಇತ್ಯಾದಿಸಂಖ್ಯಾವಾಚಕಗಳು ಸಹಜ ಸಮಾಸಲಿಂಗಮಾಗಳು. ಅವು ಸಮಾಸದಲ್ಲಿ ಕೇಳಿದರೆ ಪ್ರತ್ಯಯಾಂತಗಳಾದರೆ ಅವುಗಳಿಗೆ ಲಿಂಗ ಮಕ್ಕಂ — ನಪುಂಸಕ ಅಕಾರಾಂತಶಬ್ದಗಳು ಕನ್ನಡದಲ್ಲಿ ಹ್ರಸ್ವ ಎಕಾರಾಂತವಾಗಿ ಅಕಾರಾಂತವಾಗಲಿ ಆದನಂತರ ಅವುಗಳಿಗೆ ವಿಭಕ್ತಿಗಳ್ ಪ್ರತ್ಯಯಿಸಬಹುದು. ಉದಾ— ಏಕಾಂಗ, ದ್ವಿಮಾತ್ರಿ ಲೋಕ, ದ್ವಿತೀಯ, ತ್ರಿತಯ, ಚತುಷ್ಟ, ಪಂಚ ಬಾಣೆ, ಶಾಣೆ, ಅಂತೆ, ಉಪತ್ರ್ಯಕ, ಶಕುನ, ದಂಷ್ಟ್ರ, ವಾ ಟಾಕೆ,

ಅಂದಂ ಹ್ರಸ್ವೇಬಂತಮ
ಬಾಂದತ್ಪ್ರಂ ಹ್ರಸ್ವಮೆನಿಬಿಂದುವಂತೆ ॥
ದ್ವ್ಯಾದಿಸಮಸ್ತಾಕ್ಷರ
ಮಾದಿವಿಕೃತಿಶಬ್ದವುತ್ತು [illegible]

ಅರ್ಥ- ಸಂಸ್ಕೃತದ ಆಕಾರಾಂತಮಲ್ಲದ ಆಕಾರಾಂತವು-
ಹ್ರಸ್ವ ಎಕಾರಾಂತಮಾಗಿ ಹೊಂದಲಿಂಗಮಕ್ಕುಂ - ಈಕಾರಾಂತ,
ಊಕಾರಾಂತಂಗಳ್ ಹ್ರಸ್ವಮಾಡಿ ಹೊಂದಲಿಂಗಮಕ್ಕುಂ. ಜ್ಞಾ
ಶಬ್ದ ಮೊದಲಾದ ಏಕಾಕ್ಷರಂಗಳಾದ ವಿಕಾರಿ ಶಬ್ದಂಗಳ್ ಇದೀತ
ರದಿಂ ಲಿಂಗಮಕ್ಕುವು. ಉದಾ — ವಾರ್ತೆ, ಅಭಿಲಾಷೆ, ಉದಾ-
ಹರಣೆ, ದಯೆ, ಪ್ರಶ್ನೆ, ಊಹೆ, ಅಳಕೆ, ಎಂಬಿವು ವರ್ತೆ, ಅಭಿ-
ಲಾಷೆ, ಎಂಬಂತೆ ಎಕಾರಾಂತಮಾದೊಡಂ ಲಿಂಗಮಕ್ಕುವು.
ಲಕ್ಷ್ಮೀ ಗೌರೀ ಸರಸ್ವತೀ ಭಾಮಿನೀ ಇತ್ಯಾದಿ ಈಕಾರಾಂತ
ಗಳೂ, ಶರಯೂ, ಕಂಡೂ, ಸ್ವಯಂಭೂ ಇತ್ಯಾದಿ ಊಕಾರಾಂ
ತಂಗಳೂ ಲಕ್ಷ್ಮಿ, ಗೌರಿ, ಶರಯು, ಕಂಡು ಎಂಬಂತೆ ಹ್ರಸ್ವಾಂತ
ಮಾದೊಡಂ ಲಿಂಗಮಕ್ಕುಂ, ಜ್ಞಾ, ಮಾ, ಶ್ರೀ, ಸ್ತ್ರೀ, ಭ್ರೂ, ಗೋ
ಇವು ಮೊದಲಾದ ಏಕಾಕ್ಷರ ಶಬ್ದಂಗಳು ಇದೀತರದಿಂ ವಿಭ-
ಕ್ತಿಯಂ ಪಡೆವುವು.

ಅತ್ಯಾಂತಮುಮಿತ್ಯಾಂತಮು
ಮುತ್ಯಾಂತಮುಮಾಯುರಂತಮುಂ ನಿಜಲಿಂಗಂ॥
ಏಮುತ್ಕಾರಾದೇಶಮ.
ದತ್ತಂಬೀಸಂಧಿಧಾತೃಶಬ್ದಂಗಳಾಂತಂ॥ ೧೩॥.

ಅರ್ಥ— ಅ, ಇ, ಉ, ಋ ಕಾರಾಂತಂಗಳು ಸ್ವಭಾವ-

*Shabdamanidarpana*

# ಶಬ್ದಮಣಿದರ್ಪಣವು.

ಏಕದ್ವಿತ್ರ್ಯಾದಿಸಮಾ
ಸಾಕೃತಿಯುಂ ಪ್ರತ್ಯಯಾಂತದಿಂದಿರೆ ಲಿಂಗಂ
ಪ್ರಾಣಿಯನತ್ತಮನಿರ
ತಾಕಾರಂ ಬಹುಳದಿಂ ಪೆತ್ತಳ್ದಿರೆ ಲಿಂಗಂ ||೧೧||

ಅರ್ಥ - ಏಕ, ದ್ವಿ, ತ್ರಿ, ಇತ್ಯಾದಿ ಸಂಖ್ಯಾವಾಚಕಗಳು ಸಹಜ
ಮಾನಿಲಿಂಗಮಾಗವು. ಅವು ಸಮಾಸದಲ್ಲಿ ಸೇರಿದರೆ ಪ್ರತ್ಯ-
ಯಾಂತಗಳಾದರೆ ಅವುಗಳಿಗೆ ಲಿಂಗಮಕ್ಕು - ಸಂಸ್ಕೃತ
ಆಕಾರಾಂತಶಬ್ದಗಳು ಕನ್ನಡದಲ್ಲಿ ಹ್ರಸ್ವ ಅಕಾರಾಂತವಾದ
ಅಕಾರಾಂತವಾಗಲು ಬಾದದಂತೆ ಅವುಗಳಿಗೆ ವಿಭಕ್ತಿಗಳ-
ನ್ನು ಹತ್ತಿಸಬಹುದು. ಉದಾ— ಏಕಾಂಗ, ದ್ವಿಮುಖಿ
ಯೋಗ, ದ್ವಿತಿಯ, ತ್ರಿತಯ, ಚತುಷ್ಕ, ಸೀತೆ ಬಾಲೆ,
ಶಾಲೆ, ಲತೆ, ಉಪತ್ಯಕ, ಕರುಣಾ, ದಂಷ್ಟ್ರ, ವಾಟಿಕೆ, ...

ಉದಂ ಪ್ರಸ್ಥಿಬಂತೆಮ
ಬಾದಕ್ಷಂ ಪ್ರಸಾಧು ನಿಟಿರೂದಂತೆ ||
ಬ್ರಾದಿಸಮಸ್ತ್ಯಕಾಕ್ಷರ
ಮಾದವಿಕೃತಿಶಬ್ದಮುಕ್ತಿ ವಿಧಿಯಿ

ಅರ್ಥ- ಸಂಸ್ಕೃತಭಾಷಾಕಾರಾಂತಮಲ್ಲದ ಅಕಾರಾಂತವು-

ತ್ವಕ್ಕೆ ಏಕಾರಾಂತಮಾದಿಪುಂಲಿಂಗಮಕ್ಕುಂ - ಈಕಾರಾಂತ,

ಊಕಾರಾಂತಂಗಳ್ ಹ್ರಸ್ವಮಾದಿಪುಂಲಿಂಗಮಕ್ಕುಂ. ಜ್ಯಾ

ಶಬ್ದಮೊದಲಾದ ಏಕಾಕ್ಷರಂಗಳಾದ ಸಂಸ್ಕೃತಶಬ್ದಂಗಳ್ ಇದಿರ್ತ

ರದಿಂ ಲಿಂಗಮಪ್ಪುವು. ಉದಾ — ವಧು, ಅಭಿಲಾಷ, ಉದಾ-

ಹರಣ, ದಧಿ, ಪ್ರಶ್ನೆ, ಊಹ, ಅಗ್ರ, ಎಂಬವುವರ್ಕೆ, ಅಭಿ-

ಭಾಷೆ, ಎಂಬಂತೆ ಏಕಾರಾಂತಮಾದಪುಂಲಿಂಗಮಪ್ಪುವು.

ಲಕ್ಷ್ಮೀ, ಗೌರೀ, ನಾರಸ್ತೀ, ಭಾಮಿನೀ ಇತ್ಯಾದಿ ಈಕಾರಾಂತ

ಗಳೂ, ಶರಯೂ, ಕಂಡೂ, ಸ್ವಯಂಭೂ ಇತ್ಯಾದಿ ಊಕಾರಾಂ

ತಂಗಳೂ ಲಕ್ಷ್ಮಿ, ಗೌರಿ, ಶರಯು, ಕಂಡು ಎಂಬಂತೆ ಹ್ರಸ್ವಾಂತ

ಮಾದಪುಂಲಿಂಗಮಕ್ಕುಂ, ಜ್ಯಾ, ಮಾ, ಶ್ರೀ, ಸ್ತ್ರೀ, ಭ್ರೂ, ಗೌ

ಇವು ಮೊದಲಾದ ಏಕಾಕ್ಷರ ಶಬ್ದಂಗಳು ಇದಿರ್ತರದಿಂ ವಿಭ-

ಕ್ತಿಯಂ ಪಡೆವುವು.

ಅತ್ಯಾಂತಮುಮಿತ್ಯಾಂತಮು
ಮುತ್ಯಾಂತಮುಮಾ ಏದಂತಮುಂ ನಿಜಲಿಂಗಂ॥
ಏಮುತ್ತ ಕ್ಷಾರಾದೇಶದ.
ದತ್ತಂ ಪೀನಂ ವಿಧಾತ್ರಶಬ್ದಂ ಕಾಂತಂ॥ ೧೩॥

ಅರ್ಥ— ಅ, ಇ, ಉ, ಏಮುಕಾರಾಂತಂಗಳ್ ಸ್ವಭಾವ-

ತ: ಲಿಂಗಮಪ್ಪುವು. ಉದಾ - ಭುವನ, ಭವನ, ಶೀಲ, ಶ್ರೋ
ತ್ರ; ಕವಿ, ಗಿರಿ; ಮುನಿ; ಪಶು, ಶತ್ರು, ದಾರು; ಪಿತೃ, ಮಾತೃ, ಕರ್ತೃ
ಇತ್ಯಾದಿ. ಮೀನಸ್ವರಣದಿಂ ಋಕಾರಾಂತಕ್ಕೆ ಆ ಕಾರಾದೇಶವು
ಬಿ ಪಿತ್ರಾರ, ಹೋತಾರ, ಕರ್ತಾರ, ಭರ್ತಾರ, ದಾತಾರ, ಜೇತಾರ
ದು; ಧಾತೃಶಿಥಾತನೆಂದು ಪ್ರಯೋಗಮುಂಟು. ಈ ಧಾತೃ
ಪ್ರಕೃತಿ ವಿಕಲ್ಪದಿ ಸಾಂತಮಪ್ಪುಂ. ಧಾತ್ರನೆಂದು ಪ್ರಯೋಗ
ಮುಂಟು.

ಜನಮುಂ ವಸಂಸ್ಕೃತವ್ರ
ಜನಾಂತಲಿಂಗಂಗಳತ್ತಮುಂ ಧಿತ್ತತ್ರಿಸು॥
ತ್ರನಿಯೋಗಮನಂತ್ಯಾದ.
ಶನಿಮುಂ ಮಸ್ರಾಕ್ಷ ಕನ್ಮತಕ್ಕೆ ವುಲಿಂಗ॥೧೪॥

ಅರ್ಥ - ಸಂಸ್ಕೃತವ್ರಂಜನಾಂತಶಬ್ದಂಗಳಂ ತ್ರಿಯೊಳ್ ತತ್ಸ
ಮಡುಂ; ತ್ರಿತ್ತಂ ಬೇಕಸಿದ ಉತ್ತಂ ಪದೆಯುಂ, ಅಂತ್ಯವ್ಯಂಜನ
ಮೋಪಮಂ ಪಡೆದುಂ, ಲಿಂಗಮಪ್ಪುಂ - ಉದಾ - ವ್ಯಂಜನಾ
ಕ್ಷೈ ಅಕಾರಕಿಂ ಪದಶಬ್ದಗಳು, ದಿವ್, ಸ್ರಜ್, ಚತುರ್, ಮರು
ಗಂಧರ್, ಶರಭ, ವೇದವಿಲ್, ಮರ್, ಸಮವಯಸ್, ಸೂ
ಭಾಟ್, ವಿಶಾಯನ್, ಸಂಪತ್, ಗ್ರಾವ್ ಮೊದಲಾದವುಗ
ದಿವ, ಸ್ರಜ, ಚತುರ, ಎಂಬಿತೆ ಮೊದಲಾದವು

ಶಕ್, ಅಶ್, ಕ್ಷುಧ್, ತ್ರಿವಿಷ್, ಸಂಪತ್, ಪದ್, ಯಜುಸ್

ವಿದ್ಯುತ್, ಕ್ಷಿಪ್, ಪ್ರಾವೃಷ್, ವಿರುಧ್, ವಾಕ್, ಇವು ಮೊದ-

ಲಾದ ವ್ಯಂಜನಾಂತಗಳಿಗೆ ಕುಜ್ಜು ; ಅಪ್ಪು, ಕ್ಷುಪ್ಪು ಎಂಬಂತೆ

ಉತ್ವಬೆರಸಿ ದ್ವಿತ್ವಮಾಡುವಂ ; ರಾಜನ್, ಮೂರ್ಧನ್, ಅ

ರ್ಯಮನ್, ಮಘವನ್, ಶಿವನ್, ಧಾಮನ್, ಸೀಮನ್, ಆತ್ಮನ್

ಕರ್ಮನ್, ಚರ್ಮನ್, ಬ್ರಹ್ಮನ್, ಅಧ್ವನ್, ಯುವನ್, ಪ್ರಾಯನ್

ತ್ರಿಯನ್, ಇವು ಮೊದಲಾದ ವ್ಯಂಜನಾಂತಂಗಳಿಗೆ ರಾಜ, ಮೂ

ರ್ಧ, ಅರ್ಯಮ, ಮಘವ, ಎಂಬಂತೆ ಅಂತ್ಯಲೋಪ ಮಾಡೆ

ವಂಬಂಗಮಕ್ಕುವು. ಸೀಮೋನ್ನಂಗಳ ಅದರ ತಗೆದರ ಕ್ಷು-

ದಂತೆ ಸೀಮ, ಆತ್ಮ, ಎಂದು ಎತ್ತಮಕ್ಕುಂ - ಮೋಗೆಂಬು

ದಂತ್ಸಾಂತದಲ್ಲಿ ಯಶ, ಯಶಸ್ಸು, ತೇಜ, ತೇಜಸ್ಸು, ವಯ,

ವಯಸ್ಸು, ಮನ, ಮನಸ್ಸು, , ಶ್ರೇಯ, ಶ್ರೇ-

ಯಸ್ಸು ಎಂದು ರೂಪಗಳಾಗುವವು. ಸಹಜ ವ್ಯಂಜನಾಂತ-

ಮಾಗಿ ಕೆಲವು ಇಷ್ಟವು, ವಾಕ್, ಗಿರ್, ಗೀಃ ಶಬ್ದಕ್ಕೆ ಗಿರೆಯೆಂದ

ಎತ್ತವ್ವಾ ಬರುತ್ತದೆ.

ಪ್ರಚುರತೆಯಿಂ ಪ್ರಥಮಾಬಹು.

ವಚನಂಗಳ್ ವೇದವಚನಕೃತಲಂಗಂಗಳ್ ॥

ನಿಚಿತಂ ಸರ್ವಗಣಮುನ್ನುಳ್ಳದಂ

ಪುಟಿತಜ್ಞತ್ರಿಳ್ಳಿವೃದಿಪನುದಾತ್ಪ್ರತಿಮುಖದಿಂ||೧೬||

ಅರ್ಥ- ಸಂಸ್ಕೃತಪ್ರಥಮಾಬಹುವಚನಂಗಳ್ತೆಮ್ಮವಿಸ-ರ್ಗಮಂಕಳೆಯೆಕನ್ನಡದೊಳ್ ಏಕವಚನಮಾಗಿಲಿಂಗಮಕ್ಕು-ವು. ಉದಾ— ಶ್ವಾನಂ, ಯುವಾನಂ, ಅರ್ವಾನಂ, ಜ್ಯಾಯಾಂಸಂ, ವಿದ್ವಾಂಸಂ, ಭಾಸ್ವಂತಂ, ಶ್ರೀಮಂತಂ, ಹನುಮಂತಂ, ಇತ್ಯಾದಿ....

ನೀನರಿಕರ್ನಾಟಕದೊಳ್
ಪೀನಂಸ್ತ್ರೀಪುಂನಪುಂಸಕೋಭಯಪುಂಸ್ತ್ರೀ||
ಸ್ತ್ರೀನಪುಂಸಮತ್ರಿವಾಚ್ಯ
ನಾನಾವ್ಯಯಮೆಂದುಲಿಂಗಮೊಂಬತ್ತುತೆರಂ||೧೭||

ಅರ್ಥ- ಕರ್ನಾಟಕಭಾಷೆಯೊಳ್ ಸ್ತ್ರೀಲಿಂಗಂ, ಪುಲ್ಲಿಂಗಂ, ನಪುಂಸಕಲಿಂಗಂ, ಪುನ್ನಪುಂಸಕಲಿಂಗಂ, ಪುಂಸ್ತ್ರೀಲಿಂಗಂ, ಸ್ತ್ರೀನಪುಂಸಕಲಿಂಗಂ, ತ್ರಿಲಿಂಗ; ವಾಚ್ಯಲಿಂಗಮೆಂದು ವಿಶೇಷ್ಯಾಧೀನಲಿಂಗಂ, ಅವ್ಯಯಲಿಂಗಂ, ಎಂದೊಂಬ-ತ್ತುತೆರಂ - ಉದಾ— ಸ್ತ್ರೀ, ಅರಸಿ, ದೇವಿ; ಪುಂ, ಅರ-ಸಂ, ದೇವಂ; ನಪುಂ, ಕನ್ನಡಿ, ಕಳಸಂ, ಜಡೆ, ಕೊಡೆ; ಪುನ್ನಪುಂ, ರವಿಮೂಡಿದಂ, ರವಿಮೂಡಿದುದು, ವಿಧುಮೂಡಿದಂ, ವಿಧುಮೂಡಿದುದು, ಮಂಗಳನಿವಂ,

ಮಂಗಳವಡು, ಗ್ರಹಂಗಳ್ಗೆಲ್ಲಂ ಪುನ್ನಪುಂಸಕಲಿಂಗಂಗಳ್, ಆಳ್,
ಬಂಟ, ಬಸಂತಂ, ಮಲಯಾನಿಲಂ, ಗಾಡಂ, ಇವೆಲ್ಲಂ ಪುನ್ನಪುಂ-
ಸಕಂಗಳು; ಪುಂಸ್ತ್ರೀ, ಇವರ್ ಪುರುಷರ್, ಇವರ್ ಸ್ತ್ರೀಯರ್,
ಅವರ ಗಂಡಸರ್, ಅವರ್ ದೇವಿಯರ್, ತೊಟ್ರಿಂಬುಡು ಇದ-
ಸಂತಿ; ಸ್ತ್ರೀನಪುಂ, ಆವೆಣ್ಜಾಣೆ, ಅವೆಣ್ಬಂದುದು,
ಆಕಸ್ಮಿಲ್ಲಕ್ಷಣೆ, ಈ ಕನ್ನೆ ಪೊಲ್ಲದು, ಸತಿ, ಪಾರ್ವತಿ,
ದೇವಿ ಎಂಬಿವು ಸ್ತ್ರೀನಪುಂಸಕಂಗಳ್; ತ್ರಿಲಿಂಗಕ್ಕೆ, ಸೀವರಸಂ,
ಸೀವರಸಿ, ನೀಂಪಕ್ಕು, ನೀನ್, ಆನ್, ತಾನ್, ಕಸು, ಕಸುಳ್ಗೆ,
ಮಗುವು, ಕೂಸು, ಸೊಂಡಿ, ತಿಸಿ, ಕೆಳ್ಗೆ, ಎಂಬಿವು ತ್ರಿಲಿಂಗಂ-
ಗಳ್; ವಾಚ್ಯಲಿಂಗಕ್ಕೆ, ನೆಕರದನಿಪಂ, ನೆಕರದಳ್ತಳ್, ನೆರಿತ್ರ-
ಕು, ಅಭಿಮಾನಿ, ದಾನಿ, ಸಾಧು, ಧವಳ, ಚಂಡ, ಹೇಡಿ,
ಇವು ಮೊದಲವು ವಿಶೇಷ್ಯಾಧೀನಲಿಂಗಂಗಳ್; ಅವ್ಯಯಲಿಂಗಂ-
ಗಳ್, ಕಮ್ಮಿದಂ, ಕಮ್ಮಿದಳ್, ಕಮ್ಮಿತು, ಭಾಂಕನೆ, ತೊಟ್ಟನೆ,
ಪಿಟ್ಟನೆ, ಕಮ್ಮನೆ, ಇಮ್ಮನೆ, ಸುಮ್ಮನೆ, ಪಿಟ್ರನೆ, ಕಟ್ಟನೆ,
ಬಟ್ಟನೆ, ತಳ್ಳನೆ, ಬೆಟ್ಟಂ, ಬೆಟ್ಟರಂ.

ವಚನಸಾಮಾನ್ಯಂ

ತ್ರಿಗಳುಂ ಗುಣವಚನಸರ್ವನಾಮಬಹ
ಳಗಳುಂ ಕೃತ್ತದ್ಧಿತಸಂ

ಪ್ರಗಳುಂ ಸಲೆ ವಾಕ್ಯಲಿಂಗಮೆಂದಿಕ್ಕುಮಱಿಂ ॥ ೧೮ ॥

ಅರ್ಥ — ನೀನ್, ಆನ್, ತಾನ್, ಎಂಬಿವುಂ; ಗುಣವಚ
ನಮುಂ, ಸರ್ವನಾಮಮುಂ; ಬಹುವ್ರೀಹಿ, ಕೃತ್ತುಂ; ತದ್ಧಿ
ತಮುಂ; ಸಂಖ್ಯೆಯುಂ ವಿಶೇಷ್ಯಾಧೀನಲಿಂಗಮೆಂದು ಅಱಿ-
ವಿದಿಯುಂ ಅರಿವುದು. ಉದಾ — ನೀಂ ರಾಮಂ, ನೀಂ ಸೀತೆ-
ನೀಂ ಗಿಳಿ, ಆಂ ಶಿವಂ, ಆಂ ಗೌರಿ, ಆಂ ವಂದಿ; ತಾನವಂ, ತಾ-
ನವಳ್, ತಾನದು; ಗುಣವಚನ, ಇನಿಯಂ, ಇನಿಯಳ್,
ಇನಿಯದು; ಸರ್ವನಾಮಕ್ಕೆ, ಪೆರಂ, ಪೆರಳ್, ಪೆರದು; ಬ
ಹುವ್ರೀಹಿ, ಅಲಂಪುಗೊಂಡನವಂ, ಅವಳ್, ಪುಸಿಗೊಂಡಳ್,
ಅದು ಸಾಸಿಗೊಂಡುದು; ಕೃತ್ತಿಗೆ, ನೋಡಂ, ನೋಡುವಳ್, ನೋ
ಡುದು; ತದ್ಧಿತಕ್ಕೆ, ಬಿಲ್ಲಾಳಂ, ಬಿಲ್ಲಾಳಳ್, ಬಿ
ಲ್ಲಾಳದು; ಸಂಖ್ಯೆಗೆ, ಸಾಯಿರವೆಂಟರ್, ಸಾಯಿರವಾ
ಸ್ಗೆ.

ದೊರೆವಪದವ್ಯಯಲಿಂಗಂ
ಸಲೆ ಸರ್ವವಿಭಕ್ತಿಗಂ ತ್ರಿಲಿಂಗಕ್ಕಂ ತಾಂ ॥
ನಿಂದಪದಸತ್ರಿತಯಕ್ಕಂ
ಸಲೆಯಾವಸಿವಿಕಾರಮಿಲ್ಲದರ್ಥಮನಿರ್ಕಂ ॥ ೧೯ ॥

ಅರ್ಥ — ಅವ್ಯಯಲಿಂಗಮೆಂಬುದು ಸರ್ವವಿಭಕ್ತಿಗಂ, ಮೂ

ಸ್ತ್ರೀ ನಪುಂಸಕಕ್ಕಂ, ಅರ್ತ್ರಿಬ್ರಹ್ಮಚರ್ಯದಕ್ಕಂ, ಸಂಯೋಗಿ
ದ್ವಿತೀಯಾ ನಕ್ಷತ್ರ. ಮಧ್ಯದ. ಉದಾ — ಸಿನಿಗಂಬಂ
ಪನಂ ಬಳ್ಳಿಗೆ ನಿಗಮೊತ್ಥಂ ಬಂಧನಂ ಬುದ್ಧ್ರಥಮ ಯೆನಂಪುದು,
ಸುರತದಸಂ ದನಂ ಸ್ವರಕಣ್ಣುಯಕ್ಷುದಮಾನ ಪುತ್ರಿಮಾ,
ಕಕಾರಕಾಲಕ್ಕೆ ಸ್ವರಭಾದುವಿಕೋಂಬರ್ತ್ತ ಪಾಠಕಂ,
ದರವಂದಾರದಿ ವಿಷಯರಗಾಷುರಷ್ಟ್ರ ಕೃತಾಂತನಂ ಕುವಿ,
ಸರಕಮ್ಮ ಮೊಲ್ಹ್ರುಬಾರನಿದಿರಕ್ಷ ಸುದೇಕ್ಷ್ಲಿ ಸಿನಿಂ ಕುವಿ-
ವಕ್ಷ॥ ಚಕ್ಷುರಂ ಮಂಡಕಂ ಬಳ್ಳಿ ಚಕ್ಷುಕ್ಷ ಮಂ ನು ಬಕಸಿಂ-
ಬಕ್ರಿಯೆ ಯೆನಂಪುದು. ಅಂತರಂ ದಂ ಬಳ್ಳಿ ಪಂಚಮಿ-
ಯಂ ಅದಂ ದಂ ಬತ್ರಕೆ ಯೆನಂಪುದು. ಷಷ್ಠಿ, ಸಪ್ತ
ಸ, ಬರದನಂಬ್ಬುತುರ್ಥಿ ಯೆನಂಪುದು. ಸುತ್ರಿಸಂಬ
ಬ್ಬಸಕ್ತಿಯೆನಂಪುದು. ತ್ರುಬಂಗಕ್ಕೆ ಸುತ್ರೆಸಿಂದಂ, ಸುತ್ರೆ
ಸೊಂದರ್ಕೆ, ಸುತ್ರಸಿಂದುದು. ವಚವತ್ರಯಕ್ಕೆ, ಭಾಂ
ವನೊಂದರ್ಗೆ ಬಂದಂ, ಮೆಲ್ಲ ನಿವರ್ನಮಿದರ್, ನೆಟ್ಟನೆ-
ಬ್ಬರುಕೊಂಡರ್.

*Notice*

# जाहीरात.

## दक्षिण भागांतील सर्व स्कूलमास्तर यांस.

एज्युकेशनल इन्स्पेक्टर साहेब दक्षिण भाग यांजकडू
तीन महिन्यांनी इन्स्पेक्शन रिपोर्ट पाठवावे असा हुकूम
झाला आहे. तो हुकूम स्कूलची स्थितीचा ध्यानांत
हे असें समजावें. स्कूलची स्थितीचे तपशील
दर तिमाही पाठवावें. कळावें तारीख १ माहे

(Signed) W. D. Russell

एज्युकेशनल इ. द. भाग.

---

जाहिरात. दक्षिण भागांतील सर्व स्कूलमास्तर
कसबा एन्कनमुळीं तालूक निकेडी येथील मास्तर
तो आपली खुशी, त्या शाळेचा चार्ज घेतल्यापासून
या अभ्यास यांजला न वाढविला शाळा असतां
त आणली. मार्च महिन्यांत आठ दिवसांची हजेरी
भरली नव्हती. असें कळून आल्यावरून त्याहून
चापणार कशी करतात ...

आह्मांस असें कळून येतें कीं, नार्मलस्कुलांतील विद्यार्थी बाहेर शाळांवर पाठविले जातात त्यांजला त्यांचे कराराप्रमाणें तीन वर्षें काम केलें पाहिजे तें काम तितकी मुदत न करण्याचे इराद्यानें शाळेची स्थिती अगदीं वाईट करितात याजकरितां असें कळविण्यांत येत आहे कीं, जो मास्तर शाळेचें काम चांगलें रीतीनें करणार नाहीं त्याजला कराराच्या मुदतीपर्यंत कमी पगार देण्यांत येऊन नंतर त्यास शाळाखात्यांतून काढून टाकलें जाईल. ता० १ एप्रिल १८६७

(Signed) W. A. Russell,

इन्स्पेक्टर न० द० दक्षिणभाग.

---

*The Examination of T. C. Students.*

ಟ್ರೇನಿಂಗಕಾಲೇಜದ ವಿದ್ಯಾರ್ಥಿಗಳ
ಪರೀಕ್ಷೆ.

ಈ ಊರಲ್ಲಿಯ ಟ್ರೇನಿಂಗಕಾಲೇಜದ ವಿದ್ಯಾರ್ಥಿಗಳ ಪರೀಕ್ಷೆಯು
[illegible]
[illegible]

ಕನ್ನಡ ವಾಚನ- ಕಥಾಸಂಗ್ರಹ ೧ನೇ ಭಾಗ, ಹಿಂದುಸ್ಥಾನದ-ಇತಿಹಾಸ, ಕನ್ನಡ ಬಾಲವ್ಯಾಕರಣ, ಕನ್ನಡ ಭಾರತ ಒಂದುವರಿ ಅಧ್ಯಾಯ. ಮಹಾರಾಷ್ಟ್ರ ವಾಚನ ೫ನೇ ಪುಸ್ತಕ. ಸಂಸ್ಕೃತ ಶಬ್ದ ರೂಪಾವಳಿ, ಧಾತುರೂಪಾವಳಿ, ಮೊದಲನೇ ಪಾಠದ ಪುಸ್ತಕ. ಇಂಗ್ಲಿಷ ೨ನೇ ಪುಸ್ತಕ ಭಾಗ ೨ನೇದು. ಅಂಕಗಣಿತ, ಬೀಜಗಣಿತ, ಮೂಲದ ಮೀಕರಣಗಳು, ಕರಣಿ, ಯುಕ್ಲಿಡನ ೧ನೇ ಪುಸ್ತಕದ ೪೮ ಸಿದ್ಧಾಂತಗಳು. ಭೂಗೋಲ ೪ ಖಂಡಗಳೂ, ಹಿಂದುಸ್ಥಾನವೂ, ಭೂಗೋಲದ ಮೇಲಿನ ಕೃತ್ಯಗಳು ೨೦ ಮೋಡಿ ಹೊಸಗಳು ಹಿಂದುಸ್ಥಾನದ ಇತಿಹಾಸ ೨ ಭಾಗಗಳು. ಶಿಕ್ಷೋಪಯೋಗಿ ಪದಾರ್ಥ ವಿಜ್ಞಾನ ೩೫ ಪಾಠಗಳು.

## ೬ನೇ ವರ್ಗ.

ಕನ್ನಡ ವಾಚನ, ಕಥಾಸಂಗ್ರಹ ೨ ಭಾಗಗಳು, ಕನ್ನಡ ಬಾಲವ್ಯಾಕರಣ, ಪ್ರೌಢ ಬಿ ೧೩ ಪ್ರಕರಣಗಳು. ಇಂಗ್ಲಿಷ ೨ನೇ ಪುಸ್ತಕ ೧ನೇ ಭಾಗ ೪ ಪಾಠಗಳು. ಅಂಕಗಣಿತ, ಬೀಜಗಣಿತ ವರ್ಗಸಮೀಕರಣ ಆರಂಭ. ಯುಕ್ಲಿಡನ ೧ನೇ ಪುಸ್ತಕದ ೧೧ ಸಿದ್ಧಾಂತಗಳು. ಭೂಗೋಲ ೩ ಖಂಡಗಳು. ಶಿಕ್ಷೋಪಯೋಗಿ ಪದಾರ್ಥ ವಿಜ್ಞಾನ ೧ನೇ ಭಾಗವು. ಹಿಂದುಸ್ಥಾ

ಕನ್ನಡ ಹಿಂದುಸ್ಥಾನದ ಇತಿಹಾಸ ೨ ಭಾಗಗಳು.

## ಮೂರನೇ ವರ್ಗ.

ಕನ್ನಡ ವಾಚನ, ಮೂರನೇ ಪುಸ್ತಕ, ಕಥಾಸಂಗ್ರಹ ೬೦ ಪುಟಗಳು ಕನ್ನಡ ವ್ಯಾಕರಣ ೪೨ ಪುಟಗಳು. ಮಹಾರಾಷ್ಟ್ರ ವಾಚನ ೪ನೇ ಪುಸ್ತಕ: ಇಂಗ್ಲಿಷ ೧ನೇ ಪುಸ್ತಕ; ಭೂಗೋಲ ಏಶಿಯಾ, ಯೂರೋಪ, ಹಿಂದುಸ್ಥಾನ ಇವುಗಳ ಪುಸ್ತಕ———ಗಾರಿಟ ಧಾರಕ ಹಿಂದುಸ್ಥಾನದ ಇತಿಹಾಸ ೬೦ ಪುಟಗಳು. ಸೀಹೋಪಂತರ ಪದಾರ್ಥವಿಜ್ಞಾನ ೧೬ ಪುಟಗಳು.

---

## ಪರೀಕ್ಷೆಯ ಪ್ರಶ್ನೆಗಳು.

### ಗಣಿತ.

$$\frac{೨\frac{೫}{೭}+\frac{೨}{೪}+\frac{೨}{೩}}{೫};\quad \frac{\cdot ೫೫೮೧೪\cdot ೦೨೭}{\cdot ೦೦೧೫}$$

$$\frac{೧\frac{೨}{೩}-\cdot ೦೬}{೭\times ೧\cdot ೫}\times\frac{\frac{೨}{೩}+\frac{೫}{೭}-\cdot ೨}{೫}$$

ಒಬ್ಬ ಮನುಷ್ಯನು ೧೪೫ ರೂಪಾಯಿಗಳಿಗೆ ೧೫ ಮಣ ಅಕ್ಕಿ ತಗೆದುಕೊಂಡು ಅದರಲ್ಲಿ ೭ ಮಣ ಅಕ್ಕಿಯನ್ನು ಮಾರಿದನು.

ಉಳ್ಳದ ತುಣ್ಣವನ್ನು ಮಾಡಿ ಎರಡು ಪಾಯಿಂಟಾಗಿದೆ
ಕಿಸಿದನು. ಮತ್ತಾಕೆ ಬಾಕ್ಸ್ ರೂಪಾಯಿಗಳ ಶೇಷ ಮಾಡಿದ
ಕ್ಷ್ಮ, ಬಾಕಿ ತುಪಾಸ್ತ್ರಗಳನ್ನು ವಿಂಗಡಿಸಿ ಮೊತ್ತವು ಎಂತ
ಯಾಂಬವನು ಕ್ಷ ಪಟ್ಟದಿಂದ ಬೆಳಿಗ್ಗೆ ಘಂಟೆಗೆ ಎ
ಟ್ರೈನ್ನು ಹೊರಡುವ ದಕ್ಕೆ ಹೋದ. ಅವನು ಗಂಟೆಗೆ ದಿವ
ಸಂದಕ್ಕೆ ೩ ಮೈಲು ನಡೆಯುತ್ತಾನೆ, ಅದೇ ದಿವಸ
ಗಂಟೆಗೆ ಬ ಯಾಂಬವನು ಎ ಪಟ್ಟಣದಕ್ಕೆ ಪಟ್ಟಕ್ಕೆ
ಹೋಗುವ ದಕ್ಕೆ ಹೊರಟ. ಅವನು ಗಂಟೆಗೆ ಎ ದಿವಸಕ್ಕೆ
ಮೈಲು ನಡೆಯುತ್ತಾನೆ, ಅವರಿಬ್ಬರೂ ಎಷ್ಟು
ಕ್ಕೆ ಬಾಕ್ಸ್ ಕಾಲ ಬೇಕಾಗುವದು? ಪಟ್ಟಣಗಳಿಂದ
ಸೇರುವ ಪಟ್ಟಗಳ ಅಂತರ ಬಾಕ್ಸ್ ಮೈಲು?

೪ $\frac{ಕ್ಷ+ಅ}{ಬ} + \frac{ಕ್ಷ-ಬ}{ಅ} = ಅ+ಬ$. ಕ್ಷ = ಎಷ್ಟು?

೫ $\frac{ಕ್ಷ + ೨}{ಕ್ಷ - ೨} - ಕ್ಷ - ೫ = \frac{ಅ + ೨}{೪}$. ಕ್ಷ = ಎಷ್ಟು?

೬ $ಅ\sqrt{ಕ್ಷ} + (ಅ-ಬ)\sqrt{ಕ್ಷ} = ೨\sqrt{ಅಕ್ಷ + ಬಕ್ಷ}$. ಕ್ಷ = ಎ

೭ ಎಪ್ಪತ್ತನೇ ಮತ್ತು ಎಪ್ಪತ್ತೊಂದನೇ, ೭೨ನೇ ಸಿದ್ಧಾಂತ
ಗಳನ್ನು ಸಿದ್ಧಮಾಡಿರಿ.

# ಭೂಗೋಲ.

ಪೂರ್ವಮಹಾದ್ವೀಪವನ್ನು ಪ್ರಥಮದ, ಪಶ್ಚಿಮದಕ್ಷಿಣದ ಮಹಾದ್ವೀಪವೆಂಬುವದಕಾರಣವೇನು! ಇವುಗಳಲ್ಲಿಯೂ ವಮಹಾದ್ವೀಪವು ಯಾವುದರಿಂದ ಗೊತ್ತಾದದ್ದು ಪ್ರಶ್ನೆ!

೧ ಪ್ರಧಾನದಮರ್ಯಾದೆಗಳನ್ನು, ಪಶ್ಚಿಮದಯಾದೆಗಳೊಂದುವಸ್ತುಪದದೇಶಗಳನ್ನು, ಅವುಗಳ ಪ್ರಧಾನಿಗಳನ್ನು ಬರೆ!

೨ ಯುರೋಪಿನ ದಕ್ಷಿಣಭಾಗದದೇಶಗಳನ್ನು, ಅವುಗಳ ರಾಜಧಾನಿಗಳನ್ನು ಬರೆ!

೩ ಬಹುದೊಡ್ಡದಾದಭೂಮಿಯಲ್ಲಿಯಾವದು! ಅದು ಎಲ್ಲಿರುತ್ತದೆ.

೪ ಯಾವದೇಶ ಯಾವಭೂಮಿಯನ್ನು ಕಡಿದಕಡೆಯಾಸಿ ಪಶ್ಚಿಮದ ಅಟ್ಲಾಂಟಿಕ ಸಮುದ್ರಗಳಿಗೆ ದಾರಿಯಹುದು.

೫ ಸಹಾರಾಪ್ರಾಂತದ ಯಾವಪ್ರಾಂತಗಳು ಪಶ್ಚಿಮದಲ್ಲಿಯಾವವು.

೬ ಕೆಲಬಂದರಗಳು ಯಾವು! ಬಂದರು ಯಾಕೆ

ಅಂಶ ಆಗಲು? ಬಹುದೊಡ್ಡ ಸಂಬಂಧ ಯೂನಿವ

---

ಉಳಿದ ಸಂಸ್ಕೃತ ವ್ಯಾಕರಣ ಮೊದಲಾದ ವಿಷಯಗಳಲ್ಲಿ ಒಟ್ಟಾರೆ ವಿದ್ಯಾರ್ಥಿಗೆ ಬೇರೆ ಬೇರೆ ಬಾಯ್ಪಿಕ್ಸ್‌ಗ ಕೇಳದ್ದರಿಂದ ಅವುಗಳನ್ನು ಭಾಷಿಸುವದಕ್ಕೆ ಅನುಕೂ ವಾಗಲಿಲ್ಲ.

---

ಪರೀಕ್ಷೆಯಲ್ಲಿ ಪಡೆದ ಗುಣಗಳ ಕ್ರಮವನ್ನು ಸಾಂ ಟ್ರೇನಿಂಗ ಕಾಲೇಜದ ವಿದ್ಯಾರ್ಥಿಗಳ ಹೆಸರುಗಳ ಪಟ್ಟಿ.

| ಸಂ | ಹೆಸರು. | ಜಾತಿ | ವಯಸ್ಸು. | ಗ್ರಾಮೊವ್ರಾರು. | ಗುಣಗಳು. |
|---|---|---|---|---|---|
| ೧ | ರಾವಜೀ ಸಂಭಾಜೀ | ಮರಾ | ೧೯ | ಸದಲಗಾ | ೧೯೪ |
| ೨ | ನಾರಾಯಣ ಅಪ್ಪಾಜೀ | ಬ್ರಾ | ೧೯ | ಧಾರವಾಡ | ೧೮೪ |
| ೩ | ಮಾನಾಜೀ ತೇಜೋ | ಕ್ಷೇತ್ರಾ | ೧೯ | ಶಿರಸಂಗಿ | ೧೮೧ |
| ೪ | ವೆಂಕಟರಾವ ರುದ್ರೋ | ಬ್ರಾ | ೧೯ | ಕುರ್ತಕೋಟಿ | ೧೮೭ |
| ೫ | ಗೋವಿಂದ ರಾಮಚಂದ್ರ | ಬ್ರಾ | ೧೯ | ಶಾಲಕೆರೆ | ೧೮೭ |

| | | | | | |
|---|---|---|---|---|---|
| ೬ | ರಘುನಾಥರಾಮಚಂದ್ರ | ಬ್ರಾ | ೧೯ | ಸವದತ್ತಿ | ೧೬೨ |
| ೭ | ರಾಮಚಂದ್ರಮಂಗೇಶ. | ಸಾರಸ್ವತ | ೧೯ | ಬೆಳಗಾವಿ | ೧೬೦ |
| ೮ | ವಿನಾಯಕಭಾಸ್ಕರ. | ಬ್ರಾ | ೧೯ | ವಿಜಾಪುರ | ೧೫೪ |
| ೯ | ಶಿವಪೂಜ | ಲಿಂ | ೧೮ | ಬೈಲಹೊಂಗಲ | ೧೫೪ |
| ೧೦ | ಗೋಪಾಲಗೋವಿಂದ | ಬ್ರಾ | ೨೦ | ಬಡಗಾವ | ೧೪೪ |
| ೧೧ | ರಾಮಚಂದ್ರವಿನಾಯಕ | ಬ್ರಾ | ೨೦ | ನರಗುಂದ | ೧೪೨ |
| ೧೨ | ಅಡಿವೆಪ್ಪಮಾದಪ್ಪ | ಲಿಂ | ೧೮ | ಸವದತ್ತಿ | ೧೪೨ |
| ೧೩ | ಶ್ರೀನಿವಾಸವೆಂಕಟೇಶ | ಬ್ರಾ | ೧೯ | ಚಿಕ್ಕೋಡಿ | ೧೩೮ |
| ೧೪ | ಶಂಕರಜೀವಾಜಿ | ಬ್ರಾ | ೧೮ | ಜಂಬಮುಖಿ | ೧೩೭ |
| ೧೫ | ವಿಠಲಗಣೇಶ | ಬ್ರಾ | ೧೯ | ಹುಕ್ಕೇರಿ | ೧೩೨ |
| ೧೬ | ವಿಷ್ಣುಕೃಷ್ಣ | ಬ್ರಾ | ೧೯ | ಹುನಗುಂದ | ೧೩೨ |
| ೧೭ | ಜಯವಂತಬಾಬುರಾವ | ಮರಾಠ | ೨೦ | ಬೆಳಗಾವಿ | ೧೩೦ |
| ೧೮ | ಪಾಂಡುರಂಗಬಾಳಕೃಷ್ಣ | ಬ್ರಾ | ೧೮ | [illegible] | ೧೨೮ |
| ೧೯ | ಸುಬಾನಾನರಸಿಂಗ | [illegible] | ೧೮ | ಹುಕ್ಕೇರಿ | ೧೧೪ |
| ೨೦ | [illegible]ಜೀಗೋವಿಂದ | ಬ್ರಾ | ೧೮ | ಜಲಾಲಪುರ | ೧೧೨ |
| ೨೧ | [illegible] | ಬ್ರಾ | ೧೯ | ಸವದತ್ತಿ | ೧೧೧ |
| ೨೨ | [illegible] | ಬ್ರಾ | ೧೮ | ಶಹಾಪುರ | ೧೧೦ |
| ೨೩ | [illegible] | ಬ್ರಾ | ೧೯ | [illegible] | ೧೦೮ |

| | | | | | |
|---|---|---|---|---|---|
| ೨೪ | ಅಣ್ಣಾಜೀರುದ್ರೋ | ಬ್ರಾ | ೧೭ | ಬೆಳ್ಗಾವಿ | ೧೦೪ |
| ೨೫ | ತಿಕಲಸದಾಶಿವ. | ಬ್ರಾ | ೧೮ | ಮಾನಾವಿ | ೯೬ |
| ೨೬ | ಗುಳ್ಳಪ್ಪಾಹುವಪ್ಪಾ | ಲಿಂ | ೧೯ | ಚಿಕ್ಕೋಡಿ | ೯೪ |
| ೨೭ | ಶಿವರುದ್ರಮುಲ್ಲಪ್ಪಾ | ಲಿಂ | ೧೭ | ಯಮಕನಮರಡಿ | ೯೪ |
| ೨೮ | ಕೃಷ್ಣಾಜೀವೆಂಕಸೋ | ಬ್ರಾ | ೧೭ | ಸಂಕೇಶ್ವರ | ೯೩ |
| ೨೯ | ವೆಂ. ರಾಜೀರಾಮಚಂದ್ರ | ಬ್ರಾ | ೧೯ | ಮುಧೋಳ | ೭೭ |
| ೩೦ | ವೆಂ. ಶ್ರಾಜೀನಾರಾಯಣ | ಬ್ರಾ | ೧೯ | ಜಮಖಂಡಿ | ೭೭ |
| ೩೧ | ವೆಂ. ರಾಜೀಕಾಶೀನಾಥ. | ಬ್ರಾ | ೧೭ | ಯಮಕನಮರಡಿ | ೭೧ |
| ೩೨ | ಗೋಪಾಳರಘುನಾಥ | ಬ್ರಾ | ೧೭ | ಹುಕ್ಕೇರಿ | ೭೧ |
| ೩೩ | ಶಿವಯೋಗಿನಿಷಣ್ಮುಖ. | ಲಿಂ | ೧೭ | ಶ್ರೀಪುರ | ೮೩ |
| ೩೪ | ಶಿವಲಿಂಗರಾಚಯ್ಯಾ | ಲಿಂ | ೧೭ | ಖಾನಾಪುರ | ೮೨ |
| ೩೫ | ಗುಂಡೋರಾಮಚಂದ್ರ | ಬ್ರಾ | ೧೯ | ಯಮಕನ | ೮೭ |
| ೩೬ | ರಾವಜೀಲಕ್ಷ್ಮಣ. | ಬ್ರಾ | ೧೭ | ಸಂಕೇಶ | ೮೭ |
| ೩೭ | ಸಂ. ಜೀವರಾಮಚಂದ್ರ | ಬ್ರಾ | ೧೭ | ಮಮ್ಮಿಗಟ್ಟಿ | ೮೩ |
| ೩೮ | ಹನುಮಂತರಾಮಚಂದ್ರ | ಬ್ರಾ | ೧೭ | ಹುಕ್ಕೇರಿ | ೫೭ |
| ೩೯ | ಶ್ರೀನಿವಾಸಅಣ್ಣಂ. | ಮು | ೧೭ | ಬೆಳ್ಗಾವ | ೪೫ |

## Educational Intelligence.

## ವಿದ್ಯಾಖಾತೆಯ ವರ್ತಮಾನಗಳು.

ಈ ತಿಂಗಳಿನ ೧೬ನೇ ತಾರೀಖಿನಲ್ಲಿ ಬೆಳಗಾವಿಯ ಟ್ರೇನಿಂಗ ಕಾಲೇಜದಲ್ಲಿ ಹೊಸ ವಿದ್ಯಾರ್ಥಿಗಳನ್ನು ತೆಗೆದುಕೊಳ್ಳುವ ಪರೀಕ್ಷೆಯಾಯಿತು. ಇದರಲ್ಲಿ ಸುಮಾರು ೯೦ ಜನ ಉಮೇದವಾರರು ಕುಳಿತಿದ್ದರು. ಅವರಲ್ಲಿ ಅಲ್ಪವಯಸ್ಸಿನ ಕಾರಣದಿಂದಲೂ, ಕನ್ನಡ ಅಕ್ಷರ ಬರೆಯೋಣ ಚನ್ನಾ ಬರದ ಕಾರಣದಿಂದಲೂ ಸುಮಾರು ೪೨ ಜನ ತೆಗೆಯಲ್ಪಟ್ಟು ಉಳಿದ ೪೭ ಜನರ ಪರೀಕ್ಷೆ ಕಡೆತನಕ ಆಯಿತು. ಇವರಲ್ಲಿ ೪೫ ಜನರು ಪೂರ್ಣಗುಣಗಳ ಮೂರನೇ ಪಾಲಿಗಿಂತ ಹೆಚ್ಚು ಗುಣಗಳನ್ನು ಪಡೆದರು. ಈ ಪರೀಕ್ಷೆಯಲ್ಲಿ ಪಾಸಾದ ವಿದ್ಯಾರ್ಥಿಗಳು ಹಿಂದಿನ ಪರೀಕ್ಷೆಗಳಲ್ಲಿ ಕೂಡುವವರಿಗಿಂತ ವಿಶೇಷ ಅಭ್ಯಾಸ ಮಾಡಿದವರಿದ್ದರೆಂದು ನೋಡಿ ನಾವು ಸಂತೋಷಪಡುತ್ತೇವೆ. ಆದರೂ ಕನ್ನಡ ಬರೆಯೋಣದಲ್ಲಿ ಆಗತಕ್ಕಷ್ಟು ಸುಧಾರಣೆಯು ಇನ್ನೂ ಆದ ಹಾಗೆ ಕಾಣಲಿಲ್ಲ. ಆದದರಿಂದ ನಮ್ಮ ಮಾಸ್ತರ ಜನರೆಲ್ಲರೂ ಈ ವಿಷಯದಲ್ಲಿ ವಿಶೇಷವಾಗಿ ಲಕ್ಷ್ಯ ಕೊಡುವರೆಂದು ನಾವು ಕೋರುತ್ತೇವೆ. ಎಷ್ಟೋ ಜನ ಮಾಸ್ತರರು ಸ್ವತಃ ತಮ್ಮ ಮೇಲಧಿಕಾರಿಗಳಿಗೆ ಬರೆದ ಪತ್ರಗಳಲ್ಲಿ ಅನೇಕ ತಪ್ಪುಗಳು ಇರುತ್ತವೆಂದು-

ನಾವು ಮೇಲೆ ಮೇಲೆ ಕೇಳುತ್ತೇವೆ. ಆದರೆ ದೇಶದಲ್ಲಿ ಇದ್ದ ಪಾಟವುಂಟಾಗುವವರೆಗೆ ಮೂಲಾರಂಭವು ಭಾಷೆಯ ಸುಧಾರಣೆಯುಂಟಾಗುತ್ತದೆಂದು ನಮ್ಮ ಮಾನ್ಯರ ಜನರು ಮಾಣಾ ತಿಳಿದುಕೊಳ್ಳಬೇಕು.

---

ಈ ದಕ್ಷಿಣಭಾಗದಲ್ಲಿ ಒಟ್ಟರನ್ನದ ಪ್ರಾಸ್ಪೆಕ್ಟರರನ್ನು ನೇಮಿಸುವದರ ಸಲುವಾಗಿ ಸರಕಾರದವರು ಮಾಹಿಯಾನಾ-೨೦೦ ರುಪಾಯಿ ತಲಬಿನ ಸಾಂಕ್ಷನ್ ಕೊಟ್ಟರೆಂದು ಕೇಳುತ್ತೇವೆ.

---

ಮೆಹೆರ್ಬಾನ ಇನ್ಸ್ಪೆಕ್ಟರ್ ಘೋರಗಳವರು ಬೆಳಗಾವಿಯಲ್ಲೇ ಇದ್ದಾರೆ. ಮುಂದಿನ ತಿಂಗಳಲ್ಲಿ ಕಲಾದಗಿಗೆ ಹೋಗುವ ಆಲೋಚನೆಯಿತ್ತು. ಆದರೆ ಈಗ ಅದು ನಿಂತ ಹಾಗೆ ಕಾಣುತ್ತದೆ.

---

ಬೆಳಗಾವಿಯ ಡಿ. ಇ. ರು ಇದೇ ಮುಕಾಮಿನಲ್ಲಿ ಇದ್ದಾರೆ. ಕಾನಡಾ ಜಿಲ್ಲೆಯವರು ಇನ್ನು ಬಜ್ಜೆಯಲ್ಲಿ ಇರುತ್ತಾರೆ. ಧಾರವಾಡದವರು ಮೂರು ತಿಂಗಳ ರಜೆ ತೆಗೆದುಕೊಂಡು

ಹೋಗಿ ಸುಮಾರು ೨ ತಿಂಗಳಾದವು:

---

ಬೆಳಗಾವಿಯ ಡಿ. ಇನ್ಸ್ಪೆಕ್ಟರರಾದ ರಾ. ರಾ. ಚನಬಸಪ್ಪನವರಿಗೆ ಧಾರವಾಡ ಜಿಲ್ಲೆಗೆ ಬದಲಿ ಆಗುವದೆಂದು ವರ್ತಮಾನವದೆ.

---

ರಾ. ರಾ. ಕನ್ನಡ ತ್ರಾನ್ಸ್ಲೇಟರರಾದ ಗಂಗಾಧರಯ್ಯನವರು ಮಹಾತ್ಮ್ಯ ನವನೀತ ಗ್ರಂಥ ಎಂದು ಕನ್ನಡ ಕಥಾಸಂಗ್ರಹದ ಪುಸ್ತಕವನ್ನು ತಯಾರು ಮಾಡಿದ್ದಾರೆಂದು ಕೇಳುತ್ತೇವೆ. ಈ ಪುಸ್ತಕವು ಕನ್ನಡ ಭಾಷೆಯ ಸುಧಾರಣೆಗೆ ಬಹಳ ಉಪಯುಕ್ತವಾದದ್ದರಿಂದ ಇದು ತೀವ್ರವಾಗಿ ಛಾಪಿಸಲ್ಪಡುವದೆಂದು ಕೇಳುತ್ತೇವೆ.

---

ಬೆಳಗಾವಿಯಲ್ಲಿ ಒಂದು ಅಚ್ಚು ಮುದ್ರೆಯನ್ನು ಇಡುವ
ವ ಹೊನ್ನಾಳ್ಳಿಯ ಭಾವಿಮಾನೆಯವರು ಮೆ. ಈಶ್ವರಧೋ
ನ್ಗವರು ಇಲ್ಲಿ ಬಂದಾಗ ಯಾರತು ಸಹಸ್ರರೂಪಾಯಿಗಳನ್ನು
ಸಾಲವಾಗಿ ಕೊಡಬೇಕೆಂದು ಬೇಡಿಕೊಂಡದಕ್ಕೆ ಅಧೂರಿಗಳು
ಒಪ್ಪಿಕೊಂಡಿದ್ದರು. ಆದರೆ ಈಗ ಈ ಭಾವಿಮಾನೆಯವರ

ಕನ್ನಡ ಅಚ್ಚುಗಳನ್ನು ಸಂಪಾದಿಸುವದಕ್ಕೋಸ್ಕರ ವಿಶೇಷಪ್ರಂ
ತ್ನಮಾಡಿದಾಗ್ಯೂ ಅವು ಅವರಿಗೆ ಎಲ್ಲಿಯೂ ಸಿಕ್ಕದಿದ್ದ
ದು ಕೇಳಿ ಬಹು ಖೇದವಾಯಿತು. ಈ ದಕ್ಷಿಣ ಮಹಾರಾಷ್ಟ್ರ
ದಲ್ಲಿ ಒಂದು ಕನ್ನಡ ಅಚ್ಚು ಛಾಪಖಾನೆಯೂ ದಕ್ಕೊತ್ತನ
ಮ್ಯಾಗಝೀನಗಳಿಗೆ ಬೇಕಾದಂಥ ಪುಸ್ತಕಗಳಾಗುವದು ಸಾಧ್ಯ
ವಲ್ಲ. ಅಂಥಾ ಪುಸ್ತಕಗಳಾದ ಹೊರತು ಈ ಕನ್ನಡ ಪ್ರಾಂತ
ಸುಧಾರಣೆಯಾಗುವದೂ ಸಾಧ್ಯವಲ್ಲ.

---

## *Correspondence.*

### ಪತ್ರಗಳ ಸಾರಾಂಶವು-

ಉಗರಗೊಳ್ಳ ತಾಲೂಕ ಪರಸಗಡ— ಶಾಲೆಯಲ್ಲಿ ಸುಮಾರು-
೪೦।೪೫ ಹುಡುಗರು ಇದ್ದಾರೆ. ಶ್ರಾ॥ ಎ. ಸಿ. ಯಾತ್ರೇಲಿದವ
ನಿಶಾನಗಳನ್ನು ದೇಸಾಯಿಗಳಾದ ರಾ. ರಾ. ಶ್ರೀನಿವಾಸರಾವ
ರವರು ಶಾಲೆಯ ಪಂತರನ್ನು ತಗೊಂಡು ಶಾಲೆಗೆ ಬಂದು ಹು
ಡುಗರನ್ನು ಪರೀಕ್ಷಿಸಿ ಸಂತುಷ್ಟರಾಗಿ ಅವರಿಗೆ ಪ್ರೈಜು
ರುಪಾಯಿಯ ಮಿಠಾಯಿಯನ್ನು ಹಂಚಿದರು.

---

ಬಾದಾಮಿ— ಶಾಲೆಯಲ್ಲಿ ೬೦ ಜನ ಹುಡುಗರಿದ್ದಾರೆ. ಸ

ದತ್ತವಿಲ್ಲದ ಪಟ್ಟಣವಾದರೂ ಇಲ್ಲ; ಶಾಲೆಯ ಗ್ರಾಮಸ್ಥರೇ ಮಾಡ-
ದಿವಸವೆ. ಕರ್ತೃಕ ಭೋರೆಗಳವರು ಶಾಲೆಗೆ ಬಂದು ಹುಡುಗ-
ರಿಗೆ ಒಂದೆರಡು ಪ್ರಶ್ನೆಗಳನ್ನು ಕೇಳಿ, ತಮ್ಮ ಸಂತಸವನ್ನು ಮಾಡ-
ಕೇಳಿದಾರಂತೆ ಶಾಲೆಗೆ ಬೇಕೆ ಬೇಕಾಗುವ ವಸ್ತುಗಳಲ್ಲಿ ಕೆಲವನ್ನಾದರೂ ಕೊಡ-
ದು ಕೇಳಿದ್ದಕ್ಕೆ ಅವರು ಸ್ವಗ್ರಾಮದಲ್ಲಿ ಒಂದು ಹಳ್ಳಿ ಕನ್ನಡ ಶಾ-
ಲೆಯುಂಟು; ಅದನ್ನು ದುರಸ್ತಿ ಮಾಡಿಕೊಳ್ಳುತ್ತೇನೆ ಎಂ-
ದು ಹೇಳಿದರು. ಅದೇ ದಿವಸ ಸಾಯಂಕಾಲಕ್ಕೆ ಹಿತಚಿಂತಕರು
ಶಾಲೆಯನ್ನು ಪರೀಕ್ಷಿಸಿ ತಮ್ಮ ಅಭಿಪ್ರಾಯವನ್ನು ರಜಿಸ್ಟರಬುಕ್ಕಿ-
ನೊಳಗೆ ಬರೆದರು. ಮಾಮಲೇದಾರರೂ, ಫೌಜದಾರರೂ
ಶಾಲೆಗೆ ಬಹಳ ಸಹಾಯ ಮಾಡುತ್ತಾರೆ. ಶಾಲೆಗಿನ್ನೂ ಯೋಗ್ಯ
ಸಾಮಾನು ಕೊಟ್ಟಿಲ್ಲ. (ಸುಪತ್ರ ಬರೆದವರು ಶುದ್ಧ ಬರೆಯುವ
ಅಭ್ಯಾಸವನ್ನಾಗಿ ಮಾಡಬೇಕೆಂದು ನಾವು ಶಿಫಾರಸು ಮಾಡು-
ತ್ತೇವೆ ಸಂ.ಕ.)

---

ದೇವನಗಿರಿ ತಾಲೂಕ ಕಡಜ್ಜಿ - ಶಾಲೆಯ ಸಹಶಿಕ್ಷಕರಾದ ರಾ.
ರಾ. ಬ್ರ. ದೀಕ್ಷಿತ ಮಹಾರಾಯರು ತಾ।। ೯ನೇ ಫೆಬ್ರುವರಿ ದಿವ-
ಸದಂದು ಶಾಲೆಯನ್ನು ಪರೀಕ್ಷಿಸಿ - ಉಪಾಯಗಳನ್ನು ಸೂಚಿಸಿ-
ಸ್ಸು ಕೊಟ್ಟಿದರು. ಇವರು ಶಾಲೆಗೆ ಬಹಳ ಸಹಾಯ ಮಾಡುತ್ತಾರೆ.

*Historical Events.*

# ಐತಿಹಾಸಿಕ ಸಂಗತಿಗಳು.

೧ ಆದಾಮನೂ, ಹವ್ವಳೂ – ಕ್ರಿಸ್ತಯನ ಜನನಕ್ಕಿಂತ ಇಬ್ಬರೂ ಕ್ರಿಸ್ತಶಕಕ್ಕೆ ಮುಂಚೆ ೪೦೦೪ ನೇ ವರ್ಷದಲ್ಲಿ ಹುಟ್ಟಿದರೆಂದು ಹೇಳುತ್ತಾರೆ. ಆದರೆ ಸೃಷ್ಟಿಯ ಕಾಲ ನಿರ್ಣಯವಾಗಿ ಕ್ರಿಸ್ತಜನರಲ್ಲಿ ೩೦೦ ಬೇರೆ ಬೇರೆ ಮತಗಳುಂಟು. ಇವುಗಳಲ್ಲಿ ಅತಿಸ್ವಲ್ಪಕಾಲ ಹೇಳುವದು ಕ್ರಿ.ಶ.ಕ್ಕೆ ಮುಂಚೆ ೩೬೧೬ ವರ್ಷಗಳೆಂತಲೂ, ಬಹು ದೀರ್ಘಕಾಲ ಹೇಳುವದು ಕ್ರಿ.ಶ.ಕ್ಕೆ ಮುಂಚೆ ೬೯೮೪ ವರ್ಷಗಳೆಂತಲೂ ಸ್ಥಾಪಿಸುತ್ತವೆ.

---

ಇನಾಕನ ಕಥೆಗಳು – ಕ್ರಿ.ಶ.ಕ್ಕೆ ಮುಂಚೆ [illegible] ನೇ ವರ್ಷದಲ್ಲಿ ಬರೆಯಲ್ಪಟ್ಟವಂತೆ. ಆದರೆ ಇನಾಕನು ಕಲ್ಪಿತ ಪುರುಷನೆಂದು ಬಹು ಮತವುಂಟು.

---

೨ ಯುಗಗಳು – ಕ್ರಿಸ್ತಿಯನ್ ಇತಿಹಾಸಕರ್ತರು ಸೃಷ್ಟಿಯ ಕಾಲದಿಂದ ಕ್ರಿಸ್ತನ ಜನ್ಮಕಾಲವರೆಗೆ ಹೋದ ಹೊಳೆಯಲ್ಲಿ ೬ ಯುಗಗಳನ್ನು ಕಲ್ಪಿಸುತ್ತಾರೆ – ೧ನೇದು, ಸೃಷ್ಟಿಯಿಂದ ಜಲಪ್ರಳಯವರೆಗೆ ವರ್ಷಗಳು ೧೬೫೬ – ೨ನೇದು, ಜಲಪ್ರ-

ಳಯದಿಂದ ಅಬ್ರಹಾಮನ ವೇಳೆವರೆಗೆ, ೪೨೭ ವರ್ಷಗಳು-ಇರುವವು, — ಅಬ್ರಹಾಮನಿಂದ ಮೋಶೆಯು ಈಜಿಪ್ತ ದೇಶವನ್ನು ಬಿಟ್ಟ ಕಾಲದವರೆಗೆ, ೪೩೦ ವರ್ಷಗಳು — ಇರುವವು, ಅಬ್ರಹಾಮನಿಂದ ಸಾಲೋಮನನು ಗುಡಿಯನ್ನು ಕಟ್ಟಿದ ವೇಳೆವರೆಗೆ, ೪೭೯ ವರ್ಷಗಳು — ಇರುವವು, ಆ ಗುಡಿಯ ಕಾಲದಿಂದ ಜೆರೂಸಲೇಮು ಹಾಳಾದ ಕಾಲದವರೆಗೆ ೪೨೪ ವರ್ಷಗಳು— ಇರುವವು, ಜೆರೂಸಲೇಮು ಹಾಳಾದ ಕಾಲದಿಂದ ಕ್ರಿಸ್ತನ ಜನ್ಮಕಾಲದವರೆಗೆ ೫೮೪ ವರ್ಷಗಳು.

---

೪ ಹೊಲಗಳು - ಭೂಮಿಯನ್ನು ಹದನಮಾಡಿ ಬೀಜ ಬಿತ್ತುವ ಯುಕ್ತಿ ಜಲಪ್ರಳಯವಾದನಂತರ ತೀವ್ರವಾಗಿ ಹೊರಬಂತು. ಈ ಯುಕ್ತಿಯು ಮೊದಲು ಇಜಿಪ್ತ ದೇಶದಲ್ಲಿ ಹುಟ್ಟಿತು.

---

೫ ಅಜೀನಿಯನ್ಸ್ - ಈ ಮತದವರು ಕ್ರಿ.ಶ. ೧೮೪೭ನೇ ವರ್ಷದಲ್ಲಿ ಉಂಟಾದರು. ದೇವರು ಮಾಂಸಾಹಾರವನ್ನು ನಿಷೇಧಿಸಿದ್ದಾನೆಂದು ಇವರು ಪ್ರತಿಪಾದಿಸಿದರು. ಬಾಯಬಲದ ಜೀನಿಸಿಸ್ ಎಂಬ ಭಾಗದ ಮೊದಲನೇ ಅಧ್ಯಾಯವನ್ನು ಇವರು ಆಧಾರವಾಗಿ ತೋರಿಸಿದರು. ಈ ಹೊಸ ಮತದವರ-

ಅನುಯೋಗಗಳು ಈಗ ಮೊಂಟ್ವೆಸ್ರ ಪಟ್ಟಣದಲ್ಲಿಯೂ, ಬೇಕೆ ಇಂಗ್ಲಿಷ್ ಗ್ರಾಮಗಳಲ್ಲಿಯೂ ಹಬ್ಬುತ್ತ ನಡೆದಿದ್ದಾರೆ.

---

ಓಹವೆ- ಟೋರಿಸೆಲಿಯೆಂಬವನು ಸನ್ ೧೬೪೩ನೇ ವರ್ಷದಲ್ಲಿ ಹವೆಯ ಭಾರವನ್ನು ಗೊತ್ತು ಹಚ್ಚಿದನು. ಪಾಸ್ಕಲ್ ಎಂಬವನು ಸ. ಸನ್ ೧೬೪೭ನೇ ವರ್ಷದಲ್ಲಿ ಈ ಭಾರವು ಹವೆಯ ಉನ್ನತಿಯ ಪ್ರಮಾಣದಂತೆ ಬದಲಾಗುತ್ತದೆಯೆಂದು ಸ್ಥಾಪಿಸಿದನು. ಇತ್ತಲಾಗಿ ಹಾಲೀ, ನ್ಯೂಟನ್ ಮೊದಲಾದವರು ಅನೇಕ ಅನುಭವಗಳಿಂದ ಹವೆಯ ವ್ಯಾಪಾರಗಳನ್ನು ಅದರ ಪರಿಣಾಮಗಳನ್ನು ಪ್ರತಿಪಾದಿಸಿದರು. ಮಾಗ್ದಿಬರ್ಗ್ ಯೆಂಬಲ್ಲಿ ಓಥೋಯೆಂಬವನು ಸನ್ ೧೬೫೦ನೇ ವರ್ಷದಲ್ಲಿ ವಾತಾಕರ್ಷಕ ಯಂತ್ರವನ್ನು ರಚಿಸಿದನು.

---

# ಶಾಲಾಪತ್ರಿಕೆ.

ಪುಸ್ತಕ ೧ ಸಂಚಿಕೆ ೨.

ಬೆಳಗಾಂವಿ, ಮಾರ್ಚಿ ಮೇ ೧೮೬೬.

## *Education.*

## ಶಿಕ್ಷಣವು.

೧. ನಮ್ಮ ಶಿಕ್ಷಣದಲ್ಲೆಲ್ಲ ಒಳ್ಳೇ ಚಟಗಳನ್ನು ಜಾಗ್ರತೆಯಿಂದ ಕಲಿಸುವದಕ್ಕೆ ನಾವು ಲಕ್ಷ್ಯಕೊಡಬೇಕು.

ಚಟಗಳು ಮನುಷ್ಯನಲ್ಲಿ ಯಿರತಕ್ಕ ನೈಸರ್ಗಿಕ ಪದರಾಗಿರುತ್ತವೆ. ಅವುಗಳು ಕ್ರಮೇಣ ಹಗುರಾಗುತ್ತದೆ, ಮತ್ತು ನಾವು ಮಾಡಬೇಕಾದ ಕೆಲಸವು ಸಂತೋಷಕರವಾಗುತ್ತದೆ. ಪ್ರತಿದಿವಸದ ಸಂಸರ್ಗದಿಂದಲೂ, ಅಂತಸ್ಥವಾದ ಪ್ರೋತ್ಸಾಹದಿಂದಲೂ ಅವು ನಮ್ಮನ್ನು ಸಂರಕ್ಷಿಸುತ್ತವೆ. ನಮ್ಮ ನಡತೆಗೆ ಸಂಬಂಧವಾದ ಚಟಗಳಿಗಿಂತ ಮಾನಸಿಕ ಚಟಗಳು ಕಡಿಮೆ ಅವಶ್ಯಕವಾದವುಗಳಲ್ಲ. ಇದಕ್ಕೆ ಉದಾಹರಣೆಯಾಗಿ ಹೇಳುವದಾದರೆ, ಯಾವದೊಂದು ನಿಯಮದ ಆಶ್ರಯದಿಂದ ಉದಾಹರಣೆಗಳನ್ನು ಬಿಡಿಸುವದಕ್ಕಿಂತ ಆ ನಿಯಮದ ಮೂಲತತ್ವಗಳ ಆಶ್ರಯದಿಂದ ಬಿಡಿಸು-

ಬಿಸುವ ಚಟವು ಬಾಲಕರಜ್ಞಾನಕಲೆಗಳನ್ನು ಜಾಗ್ರತೆಗೊಳಿಸುವ ಲ್ಲಿ ಬಹುಪ್ರಯೋಜನಕರವಾಗಿರುತ್ತದೆ.

ವಿಚಾರದ ಚಟಗಳೂ, ನವತೆಯ ಚಟಗಳೂ, ಅಭ್ಯಾಸದಿಂದಲೂ, ಪುನಃ ಪುನಃ ಆವರ್ತನಗಳಿಂದಲೂ, ಕಾಲಪಾಠ- ಸದಿಂದಲೂ ಮಾತ್ರ ಸ್ಥಿರವಾಗುತ್ತವೆ. ಒಂದು ಸಣ್ಣ ಕೆಲಸವನ್ನು ಚನ್ನಾಗಿ ಮಾಡಲಿಕ್ಕೆ ಬಂದರೆ, ಅದಕ್ಕಿಂತ ದೊಡ್ಡದನ್ನು ಮಾಡುವ ಅಪೇಕ್ಷೆಯುಂಟಾಗುತ್ತದೆ. ಕುತೂಹಲಕರವಾಗಿ ಕಾಣಿಸುವಂ ಥಾದು ಪುನಃ ಪುನಃ ಯತ್ನಮಾಡುವದರಿಂದ ಸಾಗ್ಗನೆ ಅತಿಸು ಲಭವಾಗಿ ತೋರುವದು. ಒಳ್ಳೇ ಚಟ್ಟಗಳು ಕ್ರಮಕ್ರಮವಾಗಿ ಉಂ ಟಾಗುತ್ತವೆ. ಲಕ್ಷ್ಯ, ವಿಚಾರ, ಸಂಗತಿಕರಣ, ಉದ್ಯೋಗ, ಸ ದ್ಗುಣ, ಧಾರ್ಮಿಕತ್ವ ಇವುಗಳ ಚಟಗಳು ಉದಾಹರಣೆಯ ಬಲದಿಂದ ಹ್ಯಾಗೆ ಉಂಟಾಗುತ್ತವೆಯೋ, ಹಾಗೆ ಶಿಕ್ಷಣದ ಬಲ- ದಿಂದ ಉಂಟಾಗುವದಿಲ್ಲ. ಯಾಕಂದರೆ ಯುಗತನೀಯವರು- ಮಾಡಿದ ಹಾಗೆ ಮಾಡುವ ಗುಣವು ಬಾಲಕರಲ್ಲಿ ಬಹು ಜಾಗ್ರ- ತವಾಗಿರುತ್ತದೆ. ತಾಯಿತಂದೆಗಳು ಯಾವಾಗಲೂ ಕಲಹದಲ್ಲಿ ತೊಡಗಿಕೊಂಡಿದ್ದರೆ, ಅವರ ಮಕ್ಕಳು ಅಲ್ಪಸ್ವಗಾರವಾಗಬಾರ ರು, ಅವರಲ್ಲಿ ತೀವ್ರವೇ ಉದ್ಯೋಗದ ಚಟವುಂಟಾಗುವದು. ಸ್ಥಿರತೆಯ ಹೊರತು ನಿಯಮವನ್ನು ಹ್ಯಾಗೆ ಕಲಿಸಲಾಗದೋ,

ಹಾಗೆ ಕಾರಣವನ್ನು ತಿಳಿಸದ ಹೊರ್ತು ಯಾವದೊಂದು ಕೆಲಸವನ್ನು ಹುಡುಗರಿಂದ ಮಾಡಿಸಲಾಗದು.

ಲಾಕ್ ವಿದ್ವಾಂಸನು ಹೇಳುವದೇನಂದರೆ, ಬೇರೆಯವರ ವ್ಯಾಪಾರಗಳಿಂದ ಗುಣಗಳೂ, ದೋಷಗಳೂ ಬಾಲಕರ ತಿಳುವಳಿಕೆಗೆ ಹ್ಯಾಗೆ ಸ್ಪಷ್ಟವಾಗಿ ಕಬ್ಬಗಳಿಂದ ಅವರಿಗೆ ತಿಳಿಸಕೊಡಲಾಗದು. ಯಾವ ಕೆಟ್ಟ ನಡತೆಯನ್ನು ಬಾಲಕರು ದುರ್ಲಕ್ಷ್ಯದಿಂದ ತಾವು ಸ್ವತಃ ಕೈಕೊಳ್ಳುವರೋ, ಅದನ್ನು ಬೇರೆಯವರಲ್ಲಿ ನೋಡಲು ನಾಚದಿರಲಾರರು. ಸಾಧಾರಣವಾದ ಶಿಕ್ಷಣಪದ್ಧತಿಯಲ್ಲಿ ಕಂಡುಬರುವ ದೋಷವು ನಾನು ಇಲ್ಲಿ ನಿಮಗೆ ತಿಳಿಸಲಪೇಕ್ಷಿಸುವದು ಯಾವದೆಂದರೆ, ಬಾಲಕರ ಸ್ಮರಣದಲ್ಲಿ ಯಾವಾಗಲೂ, ನಿಯಮಗಳನ್ನೂ, ಉಪದೇಶಗಳನ್ನೂ ತುಂಬಿಬಿಡುವದೇ. ಅವು ಅವರಿಗೆ ಬಹುಶಃ ತಿಳಿದಿರುವದಿಲ್ಲ, ಮತ್ತು ಹೇಳಿದ ಕ್ಷಣವೇ ಮರೆತುಹೋಗುತ್ತವೆ. ಕೆಲವು ಶಿಕ್ಷಕರು ತಮ್ಮ ವಿದ್ಯಾರ್ಥಿಗಳಿಗೆ ಅವರಶಕ್ತಿಮೀರಿ ನಿಯಮಗಳನ್ನು ಪಾಠಮಾಡಲಿಕ್ಕೆ ಕೊಡುತ್ತಾರೆ. ಅವುಗಳ ಹತ್ತನೇ ಪಾಲು ಸಹ ಪಾಠಮಾಡುವದಕ್ಕೆ ಆ ಹುಡುಗರಲ್ಲಿ ಸಾಮರ್ಥ್ಯವಿರುವದಿಲ್ಲ, ಅವುಗಳನ್ನು ಆಲೋಚಿಸಿ ಅರ್ಥ ತಿಳಿದುಕೊಳ್ಳುವದಂತು ದೂರೇ ಸರಿ. ಹೀಗಿರುತ್ತಾ ಆ ಬಾಲಕರು ಆ ನಿಯಮಗಳನ್ನು ಪಾಠಮಾಡದೆ ಇರುವದು ಸ್ವಾಭಾವಿಕವೇ ಸರಿ. ಈ ತಪ್ಪಿಗೆ ತ-

ನ್ನು ಶಿಕ್ಷಕನು ತೋರಿಸುವನೆಂದು ಅವರಿಗೆ ಗೊತ್ತು
ಅವರು ಉಪಾಯವಿಲ್ಲದೆ ಆ ಶಿಕ್ಷೆಯನ್ನು ಅನುಭೋಗಿಸಲು
ತಯಾರಾಗುತ್ತಾರೆ. ಆ ಮೇಲೆ ಶಿಕ್ಷೆಯ ಭಯವಿಲ್ಲದ ಹೊ
ದರೆ ಯಿಂಥಾ ತಪ್ಪುಗಳನ್ನಾದರೂ ಮಾಡುವದಕ್ಕೆ ಹೇ
ದೆ ಅವರು ಮೊಂಡತನದಿಂದ ನಡೆಯಲಾರಂಭಿಸುತ್ತಾರೆ.

ಆದರೆ ನಿಯಮಗಳನ್ನು ಪಾಠಮಾಡಿಸಿ ಹುಡುಗರಿಗೆ
ಕಲಿಸುವದುತ್ತಮಮಾರ್ಗವಲ್ಲ. ಆ ನಿಯಮಗಳು ಮರೆತು
ಗುವದು ಸ್ವಾಭಾವಿಕವು. ನಿಮ್ಮ ವಿದ್ಯಾರ್ಥಿಗಳು ಇಂಥಾ ದೋ
ಕೆಲಸವನ್ನು ಮಾಡುವದು ಅವಶ್ಯವೆಂದು ನಿಮಗೆ ತೋರಿ
ಅಭ್ಯಾಸದಿಂದ ಆ ಕೆಲಸ ಮಾಡುವ ಅಭಿರುಚಿಯನ್ನು ಅ
ಸ್ಥಿರಪಡಿಸರಿ. ಹೀಗೆ ಮಾಡುವದರಿಂದ ಅವರಲ್ಲಿ ಚಟವ
ಹಾಗುವದು. ಇಂಥಾ ಚಟಗಳು ಒಂದು ನೆಲೆಗೊಂಡ ನಂ
ನ್ನ ಸ್ಮರಣದ ಸಹಾಯದಹೊರತು ಮಾತ್ರ ಕೆಲಸಗಳು
ದಾಗಿಯೂ, ಸ್ವಾಭಾವಿಕವಾಗಿಯೂ ತಮ್ಮಿಂದ ತಾವೇ ಆ
ಹೋಗುತ್ತವೆ. ಆದಕ್ಕೆ ಇಲ್ಲಿ ಯೆರಡು ಸಂಗತಿಗಳನ್ನು ಹ
ಹೇಳುವದು ಅವಶ್ಯಕವಿದೆ. ಅವು ಯಾವವಂದರೆ.

೧. ಯಾವ ಕೆಲಸ ಮಾಡುವ ಚಟ ಅವರಲ್ಲಿ ಉಂಟ
ಬೇಕೆಂದು ನೀವು ಅಪೇಕ್ಷಿಸುತ್ತೀರೋ, ಆ ಕೆಲಸವನ್ನು

ಮತ ಅಭ್ಯಾಸ ಪ್ರೀತಿಯ ಶಕ್ತಿಗಳಿಂದಲೂ, ಸಾತ್ತ್ವಿಕವಾದ ಉಪದೇಶಗಳಿಂದಲೂ, ಅವರನ್ನು ಮುಂದೆ ನಡಿಸಿರಿ. ಅವರು ಯಾವಾಗಲೂ ಮರೆತರೆ, ಅದನ್ನು ಕುರಿತು ಅವರು ಬುದ್ಧಿಪೂರ್ವಕವಾಗಿ ದುರ್ಲಕ್ಷ್ಯ ಮಾಡಿದರೆಂದು ಎಣಿಸಿ ಕಠೋರವಾದ ಶಿಕ್ಷೆಗಳಿಂದ ಅವರನ್ನು ಶೋಧಿಸಬೇಡಿರಿ.

—೨ ಅನೇಕ ಚಟಗಳನ್ನು ಒಮ್ಮೆಲೆ ಸ್ಥಾಪಿಸುವ ಯತ್ನ ಮಾಡಬೇಡಿರಿ. ಅದರಿಂದ ನಿಮ್ಮ ವಿದ್ಯಾರ್ಥಿಗಳು ಗೊಂದಲ-ಪಟ್ಟು ಒಂದಾದರೂ ಪೂರ್ಣವಾಗಿ ಸ್ಥಾಪಿಸಲ್ಪಡದೆ ಹೋಗುವದು. ಎಡೆಬಿಡದೆ ಅಭ್ಯಾಸವಿಡಿಸಿ ಒಂದು ಕಾಲವಾದರೂ ಅವರಲ್ಲಿ ಸಂಪೂರ್ಣವಾಗಿ ಉಂಟಾಗಬಲ್ಲ ಕ್ರಮದಿಂದ ಅಭ್ಯಾಸ ಮಾಡಿಸುವದಕ್ಕೆ ಆರಂಭ ಮಾಡಬಹುದು.

ಲಕ್ಷ್ಯಗೊಡುವ ಚಟವೂ, ಏಕಾಗ್ರತೆಯ ಚಟವೂ, ವಿದ್ಯಾಭ್ಯಾಸದ ಮುಖ್ಯಾಂಗಗಳಾಗಿರುತ್ತವೆ.

೩. ಮೊದಲು ಹೇಳಿದಂತೆ, ನಾವು ಹೇಳುವ ಪಾಠಗಳಲ್ಲಿ ವಿದ್ಯಾರ್ಥಿಗಳು ಪ್ರೀತಿಪಡುವ ಹಾಗೆ ನಮ್ಮ ಬೋಧನಕ್ರಮವಿದ್ದರೆ ಅದರಿಂದ ಲಕ್ಷ್ಯಗೊಡುವ ಸ್ವಭಾವವು ಅವರಲ್ಲಿ ಸಹಜವಾಗಿ ಉಂಟಾಗುವದು. ಏಕಾಗ್ರವಾದ ಮನಸ್ಸಿನಿಂದ ಹೇಳಿದ ಶಿಷ್ಯನನ್ನು ಕುರಿತು, ಆಲೋಚಿಸುವ ಸ್ವಭಾವವನ್ನುಂಟು ಮಾಡುವ

ದು. ಅತಿಸ್ವಾರಸ್ಯವುಳ್ಳ, ಅತಿಕಷ್ಟತರವಾದ ಕೆಲಸವಾಗಿರುತ್ತದೆ. ಬಾಲ್ಯವಯಸ್ಸಿನಲ್ಲಿ ಇಂಥಾ ಚಿತ್ರಪ್ರಯೋಗಗಳು ಸ್ವಾಭಾವಿಕವಾಗಿ ಉಂಟಾಗಲಾರದು; ಆದಕಾರಣ ವಯಸ್ಸಿನನುಸಾರವಾಗಿ ಇದನ್ನು ಕ್ರಮಪಡಿಸುತ್ತ ನಡೆಸಿದರೆ, ತೀವ್ರವೇ ಇದು ವಿದ್ಯಾರ್ಥಿಗಳಲ್ಲಿ ನೆಲೆಗೊಳ್ಳುವದು. ಕೈ ಸ್ಥಿರವಾಯ್ತಲೂ, ಯೋಗ್ಯವಾಗಿ ಪ್ರಯತ್ನಪಡಿಸಿದ ಜ್ಞಾನಸಾಮಗ್ರಿಯಿಂದಲೂ, ಕ್ರಮರೂಢಿಯುಂಟಾಗುವದಕ್ಕೆ ಬಹು ಬಲವತ್ಸಾಧನವಾಗುತ್ತದೆ.

ಅವಲೋಕನಶಕ್ತಿಯನ್ನು ವಿಶೇಷವಾಗಿ ಜಾಗ್ರತೆ ಪಡಿಸಬೇಕು.

ಪ್ರಸ್ತುತ ಪದಾರ್ಥಗಳನ್ನು ಕುರಿತು ಕೊಡಲ್ಪಟ್ಟ ಪಾಠಗಳಿಂದ ಅವಲೋಕನದ ಚಟವು ಮುಖ್ಯವಾಗಿ ಉಂಟಾಗುತ್ತದೆ. ಹೊಲಗಳಲ್ಲಿರುವ ಗಿಡಗಳನ್ನೂ, ಪಾಷಾಣಾದಿಗಳನ್ನೂ, ಮೃಗಗಳನ್ನೂ, ಪಕ್ಷಿಗಳನ್ನೂ, ಮನೆಯೊಳಗಿನ ನಾನಾತರದ ಪದಾರ್ಥಗಳನ್ನೂ, ಪರೀಕ್ಷಿಸಿ ನೋಡುವ ಅಭ್ಯಾಸವನ್ನು ಹುಡುಗರಲ್ಲಿ ಉಂಟುಮಾಡುವದರಿಂದ ಅವಲೋಕನಶಕ್ತಿಯು ಜಾಗ್ರತೆಯಾಗುತ್ತಾ ಹೋಗುತ್ತದೆ. ನಿರಂತರವಾಗಿ ಕಣ್ಣುಗಳ ಮುಂದೆ ಇರುವ ಪದಾರ್ಥಗಳ ರಚನೆ, ಗುಣ, ಉಪಯೋಗ ಮೊದಲಾದವುಗಳನ್ನು ಕುರಿತು ಆಲೋಚಿಸುವ ಭಾವವನ್ನು ಎಚ್ಚರಿ

ವಳಿ, ಅದರಿಂದ ಮುಂದೆ ಅನೇಕ ಶಾಸ್ತ್ರೀಯ ವಿಷಯಗಳ-
ನ್ನೊಳಕೊಂಡ ನವವಿನುವ ಯೋಗ್ಯಗ್ರಂಥಂಗಳು ತ್ರ-
ದಿ......

*Shabdamanidarpana.*

# ಶಬ್ದಮಣಿದರ್ಪಣಂ

ಪುರುಷರ ಪುಲ್ಲಿಂಗಂ ಸ್ತ್ರೀ
ಯರ ಸ್ತ್ರೀಲಿಂಗಮುಳಿದುವೆಲ್ಲಂ ನಪ್ಪಾ॥
ಗಿರಿಸಲ್ಲಿಂ ಕನ್ನಡದೊಳ್
ತರುಚಿಟ ವರ್ತಿಸಲು ಮುಂಗ್ಲಿದಲಿಂಗ ಮೊಳ್ದಾನಿಕರ್ತೃ॥

ಅರ್ಥ— ಪುರುಷಂ ಪೇಳ್ವ ಶಬ್ದಂಗಳ್ ಪುಲ್ಲಿಂಗಂಗಳ್, ಸ್ತ್ರೀ-
ಯರಂ ಪೇಳ್ವ ಶಬ್ದಂಗಳ್ ಸ್ತ್ರೀಲಿಂಗಂಗಳ್, ಉಳಿದ ಶಬ್ದಂಗಳ್-
ನಪುಂಸಕಲಿಂಗಂಗಳ್, ಉಂ— ಪು, ಶಿವ, ಶಂಕರ, ಗಾಯ,
ಇಂ. ಸ್ತ್ರೀ, ಗೌರಿ ಪಾರ್ವತಿ, ಲಕ್ಷ್ಮಿ, ಇಂ ನಪುಂ, ಮರ, ಬೆಟ್ಟ,
ಮಲ, ಕರಡಿ, ಇಂ. ತಿರ್ಯಗ್ಜೀವಂಗಳ್ ಪ್ರತಿಪಾದಿತ
ಕವಸ್ತುಗಳೊಳ್ ನಪುಂಸಕಂಗಳ್ ಇ. ತುಂಬಗಳ್
ಕನ್ನಡದೊಳ್ ಪ್ರಸಿದ್ಧವಾಗಿತ್ತು. ಮುಕ್ತಲಿಂಗಗಳ್-

ಲಿಂಗತ್ರಿ-ತ್ರಯಾಂಗಮಾಗುವವು.

ಜನಶಬ್ದಮದು ನಪುಂಸಕಂ.

ಮನುಜಂ ದುಷ್ಪ್ರತ್ಯಯಾಂತಮವ್ಯಯದೆ ಪೇಳ್ದುದು॥

ಸ್ತ್ರೀಲಿಂಗಂ ಪುಂಲಿಂಗಂ

ಜನಂ ಮಹಜ್ಜನವಿಯಿತ ನಪುಂಸಕಮಕ್ಕುಂ॥ ೫೦॥

ಅರ್ಥ– ಜನಶಬ್ದಂ ನಿಜದಿಂ ನಪುಂಸಕಂ. ಅಂದರೆ ನಪುಂಸ-

ಕ, ಸಾಮಾನ್ಯವಾಗಿ ಪ್ರತ್ಯಯಗಳು ಹೊಂದಿದರೆ ಅದಕ್ಕೆ ಪುಲ್ಲಿಂಗ

ಬರುವುದು. ಉ– ದುರ್ಜನ, ಸಜ್ಜನ, ಸುಜನ, ಅಂದರೆ ಪು-

ಲ್ಲಿಂಗವಾಗುವುದು. ಜನಶಬ್ದವು ಹಿಂದಿದ್ದರೆ ಮಹಾಜನ ನಪುಂಸಕಲಿಂ-

ಗ ಬರುತ್ತದೆ.

ಸೂಡಿಸಿ ಮುಂ ವಿಭಕ್ತಿಯೊಳ್.

ಮುಂದಿಪ್ಪ ಪ್ರಥಮಾದಿ ವಿಭಕ್ತಿಗಳು॥

ಕಂಡಪ್ಪ ದರ್ಥವಶದಿಂ

ಪಿಂದೆಸಿದ ವಿವಿಧ ದಲಂಕರಿಸಲ್ಕೆ॥ ...॥

ಅರ್ಥ– ಹಿಂದೆ ಪೇಳ್ದ ನಾನಾ ಪ್ರಕಾರದ ಲಿಂಗಂಗಳಿಗೆ ಏರುವಾ-

ಗ ನಾಮ ವಿಭಕ್ತಿಗಳು, ಅವು ಪ್ರತ್ಯಯಗಳು, ಅಂದು, ಏಳ್,

ಎಂದು ಪ್ರಥಮಾ, ದ್ವಿತೀಯಾ, ತೃತೀಯಾ, ಚತುರ್ಥೀ, ಪಂ

ಚಮಿ, ಷಷ್ಠೀ, ಸಪ್ತಮಿಗಳೆಂಬ ಕಾರಕವಾಚಿಗಳು ಎನುವವು.

ಆಕಾರಕವೆಂಬುದು ಕ್ರಿಯಾನಿಮಿತ್ತಂ, ಅದು ಕರ್ತೃ, ಕರ್ಮ,
ಕರಣ, ಸಂಪ್ರದಾನ, ಅಪಾದಾನ, ಅಧಿಕರಣ, ಮೆಂದುಷ-
ಡ್ವಿಧಮಾಗಿಪ್ಪುದು. ಷಷ್ಠಿಯುಂದುಂ ಸಂಬಂಧಾರ್ಥದೊಳಂ. ಉ-
ದಾ- ಮರಂ, ಮರನಂ, ಮರದಿಂ, ಮರಕ್ಕೆ, ಮರದತ್ತಣಿಂ,
ಮರದ, ಮರದೊಳ್

ಏಕದ್ವಿತ್ವಬಹುತ್ವದು
ನೇಕದ್ವಿಬಹುತ್ವವಸ್ತುಗಳೊಳ್ಗಾಬರ್ಕುವರ್॥
ಸ್ವೀಕಾರಂ ಕನ್ನಡದೊಳ್.
ಕೇಕಬಹುತ್ವಂ ದ್ವಿವಚನಮುಚಿತದೆಬರ್ಕುಂ॥೨೩॥

ಅರ್ಥ- ಒಂದೆರಡು ಮೂರೆಂದು ಪದಾರ್ಥಮನೆಣಿಸುವೆಡೆ-
ಯೊಳ್ ಏಕವಚನ, ದ್ವಿವಚನ ಬಹುವಚನಂಗಳಂ ಸ್ವೀಕರಿಸು
ವರ್. ಏಕವಚನಬಹುವಚನಂಗಳ್ ಕನ್ನಡದೊಳುಪ್ರಶಸ್ತಂ
ಗಳ್. ದ್ವಿವಚನಮಂ ಔಚಿತ್ಯದಿನರಿವುದು. ಉದಾ- ಮೆ
ರುಚಿದು, ಕಣ್ಗಳಿವು, ಕಾಲ್ಗಳಿವು, ಕವಿಯುವಂ, ಕವಿಗ-
ಳಿವರ್. ಔಚಿತ್ಯದ್ವಿವಚನಕ್ಕೆ- ಭೀಮಾರ್ಜುನರ್, ರಾಮ
ಲಕ್ಷ್ಮಣರ್.

ಸಮನಿಸುವಾವಿಭಕ್ತಿಗ
ಳ್ಮೊದಲೊಳ್ಪಾದಂಗಳಾಗವಂ ದ್ವಿತ್ವಬಹು॥

ದ್ವಿ ಮುದಾಗೆಗಳ್ಗಾಗಮಕಪ್ಪು

ನಮನಿನಾಂ ಸಂ ಸರ್ವನಾಮಗುಣವಚನದೊಳ್ಳಂ॥

ಅರ್ಥ- ದ್ವಿಬಹುವಚನ ವಿವಕ್ಷೆಯೊಳ್ ಮೊಂತೆ ವಿಭಕ್ತಿಗಳ್ಗೆ
ದ ಮೊಳ್ ಗಳ್ಗಾಗಮಂ ಮಕ್ಕುಂ ಸರ್ವನಾಮಗುಣವಚನದೊ
ಳಂ ಮೊಳ್ ಗಳ್ಗಾಗಮಕ್ಕೆ ಇಪ್ಪುಯುಂಬ ಆದೇಶಮಕ್ಕುವ
ಉ — ದ್ವಿವಚನ, ತಾಂವೆಗಳ್, ರಂಭಾಸ್ತಂಭಕ್ಕೆಬೆಗಳ್, ಸ್ನಿ
ಳ್ ಮೆ ನೋಂಜವೀರನಕೆಗ್ಗಳ್ — ಬಹುವಚನಕ್ಕೆ — ಕೊಳ್
ಗಳ್, ದ್ವಿತಾಜ್ಞಂಗಳ್ - ಸರ್ವನಾಮ, ಅಪ್ಪುಬಿರಿಯುಪ್ಪು
ವಿಷಾದಿಂ ತಿಪ್ಪುಂರಿಯುವನಿಪ್ಪುದಿದು ವಿಭೇದಂ ನಿವಸಾ
ಗುಣಾವಾತಿ, ಇನಿಯ ಮಪ್ಪು ವಿಷಯ ಸುಖಂ ಸಂಜೀವನ
ನಿ ಪೊಳ್।

ಸಂಗದಿಪಿ ಸರ್ವನಾಮದ
ಲಿಂಗಾಂತ್ರಕ್ಷರಮಪ್ಪುದಿನಾದ್ರ್ಯಕ್ಷರಂ॥
ಲಿಂಗದೆಮೋಂ ಪಂಗುಣವಚ
ನಂಗಳೊಳ್ ತ್ರಂದುಕಾರಮಾಪೊಡಿಮೋಂಪಂ॥೨೫॥

ಅರ್ಥ- ಸರ್ವನಾಮದ ಲಿಂಗದ ಕಡೆಯಕ್ಷರಕ್ಕಂ, ಪರದಲ್ಲಿ
ರ್ದ ಅಪ್ಪುಯುಂಬ ರಕಲಕ್ಷರಕ್ಕಂ ಸಂಗವದಿಂ ಮೋಂಪಮ
ಕ್ಕುಂ. ದುಕಾರಾಂತಮಾದ ಗುಣವಾಚಿಯು ...

ಲೋಪಂ ಬರುವದು. ಉದಾ. ಪೆರರರ್ಥಮಂಗಳನೇ, ತ್ರಿ
ದಿಂ ದಂ ತಂ ದು ಶೆರರವಟ್ಟೊಳ್ ತ್ರಿಸಿಕ್ಷಣಾರಿಯ ಚತುರ್ಥೀ
ಪ್ರತಿಯೊಳ್, ನೆರೆದಿರೆ ಕೆಳ್ದುದು ಸಮಾಧಿಯು ನಿಶೆನವರ್ಗ
ಕಂ - ದುಕಾರಾಂತ ಗುಣವಾಚಿಗೆ, ಕರಿಯವು, ಆಸಿ
ದುವು; ಬರಯಿಗಳ ನುಡ್ಗಳೊಡನೆಯ, ಪಿರಿಯವುದಿ
ಕನಂಗಳಾದುವವರ ವಶಿವೆಚಿ। ಪ್ರೀತಂಗಳೊಡನೆ ಕುಂದಿ
ದು, ಪಿರುಕ್ಕಳು ಮಪ್ರಮುಂಚೆ ಬಂದಜಲದಾಗಮದೊ-
ಳ್ ........................

ಅಕ್ಷಂ ಕೂಡೆ ತುಕಾರಾಂ
ತಕ್ಕೆ ತೃತೀಯತ್ವಮಪ್ಪ ಬಿನಾದಿಗಲೋಪಂ॥
ಮಿಕ್ಕಾಸ್ತ್ರೀಪುಲ್ಲಿಂಗದೊ
ಳಕ್ಕುಮಿರರದಬಿರೆಂದು ಮೋಸ್ತ್ರಗಳೊಳ್॥೨೬॥

ಅರ್ಥ— ಗುಣವಾಚಿಯ ಕಡೆಯ ತುಕಾರಕ್ಕೆ ದುಕಾರವೂ,
ಇವು ಯೆಂಬದರ ಆದಿಗೆ ಲೋಪವೂ ಬರುವದು. ಸ್ತ್ರೀ-
ಪುಂಲಿಂಗ ವಿಷಯದೊಳ್ ಗಳ್ ಯೆಂಬುದಕ್ಕೆ ಆ-
ದೇಶ ಮಾಡಿ ಇರ್, ಅರ್, ದಿರ್, ಬಿರ್, ಯೆಂಬವು ಬರು-
ವವು. ಉದಾ—ಬೆಳ್ದುವು, ತೆಳ್ದುವು, ಪತ್ತಿವು;
ಬಿರ್, ತೋಳಿರ್, ದೇವರ್, ನಂಟರ್, ಇವರ್ಳಿರ್,

ಇವಂದಿರ್, ತಂದೆವಿರ್, ತಾಯ್ವಿರ್, ಸೊಸೆವಿರ್,

ಬರೆಪಂ ಸ್ತ್ರೀಲಿಂಗವುಮಮ.

ದಿಕ್ಕೆ ಸಂಖ್ಯಾ ಸರ್ವನಾಮ ಕೃದ್ಗುಣವಚನ॥

ಸ್ಥಿರದುರು ತದ್ಧಿತವುಂ ಮುಂ

ದರುವಕ್ಷ್ಯಮದಂತಲಿಂಗದೊಳ್ದಿಯೋಪಂ॥ ೨೭॥

ಅರ್ಥ- ಪುಲ್ಲಿಂಗಮುಂ ಸ್ತ್ರೀಲಿಂಗಮುಂ ಪೆಱಗೆವರೆಮುಂದ ವಕ್ಷ್ಯಂ- ಪುಲ್ಲಿಂಗಕ್ಕೆ, ಕೋವಿದರ್, ನಂದನರ್, ಸ್ತ್ರೀಲಿಂಗಕ್ಕೆ ದೇವಿಯರ್, ಕಾಂತೆಯರ್, ॥ ಅಂತು ಸ್ತ್ರೀರೂಪದೊಳ್ ದರ್ಣಸಂಖ್ಯೆಯುಂ, ಸರ್ವನಾಮಮುಂ, ಕೃತ್ತುಂ, ಗುಣ ವಚನಮುಂ, ತದ್ಧಿತಮುಂ, ಇದೊಂದೆಂಬರದೊಳ್ದುವ ಪ್ಸ್ರೆಗೆ, ಕುವರ್, ಪಯಿಂಥಾನಿವರ್, ಸರ್ವ-ಮಕ್ಕೆ ಪೆರರ್, ಅವರ್, ಇವರ್, ಉವರ್, ಕೃತ್ತಿಂಗೆ, ಮಾಡಿದರ್ ಬೇಡಿದರ್, ಕೊಂದರ್, ನುಡಿದರ್, ಕುಡಿಗಲ್ಲಂ ನಲ್ಲರ್ ಸ್ವತದೊಳ್ ಜತ್ರಾಣಮುಂ ಅದಂತೆಯುಂ ಮಂದಿ।ಗ ನಗಳ್ ಯುಕ್ತದೂ, ಗೂಡೆಂಬತಂ ಮಾಡಿದರ್ ಪುಗಾ ನಕವಿಗಳ್॥ ಗುಣವಚನಕ್ಕೆ, ಬೆಳ್ದರ್, ಬಲ್ಲದರ್, ತದ್ಧಿ ತಕ್ಕೆ, ಮಣಿಗಾರರ್, ಕಂಚುಗಾರರ್, ಬಿಲೆಗಾರರ್, ಪುಲ್ಲ ಮಬ್ರದಂತೆಕ್ಕೆಯುಂ ಬೋಪಂ ಸುರರ್, ನರರ್, ಧಡುಕ

ಪಾರ್ವತಿ, ಬಾಂಬಾಂತಿ.

ಈ ಪ್ರತಿಯು ಮೂಲಗ್ರಂಥದಲ್ಲಿದ್ದ ಹಾಗೆ ಅಕ್ಷರಶಃ ಬರೆದಿರುತ್ತದೆ- ಆದಕಾರಣದು ಮೂಲಗ್ರಂಥವನ್ನು ನೋಡಿ ತಿದ್ದಿಂದು ನಾವು ಸಂಶೋಧಿಸುತ್ತೇವೆ-

---

*Appointments.*

## बेळगांव जिल्ह्यांतील मास्तरलोकांच्या नेमणुका.

बगविर्गी कोण कोणत्या इसमांची, एप्रिल महिन्यांत करण्यांत आली त्याजबद्दल.

१ कसबा संरगड तालूक बिडी येथील शाळेंतील इंग्रजी मदतनीस बापूजी बाबुराव दियेकर यांस बेळगांव ॲंग्लोव्हरन्याक्युलर स्कुलांत दरमहा १८ रु. चे जाग्यावर तारीख १ पासून नेमण्यांत आलें आहे.

२ कसबा एमकनमर्डी येथील पंतोजी शिवाजी आगजी याणीं शाळेचें काम चाईर केल्यामुळें त्यांस कमी पगारावर कसबा असकडा तालुक परसगड येथें दरमहा १२ रु. पगारावर नेमणुक करण्यांत आ-

ली आहे. पूर्वी त्याला १५ मिळत असे. नेमणूक ता
रीख सदर.

३ कसबा असुंडी येथील पंतोजी नारायण रामचंद्र
वोंद्रे यांणीं काम हुषारीनें केलें. सबब त्यांला उरगो
ळ येथें दरमहा १४ रु. पगारावर नेमणूक करण्यांत
आली आहे. पूर्वी त्याला पगार १२ रु. मिळत असे.
नेमणूक तारीख सदर.

४ कसबा उरगोळ तालूक परसगड येथील पंतोजी
परापा सिदपा यांचा वर्ग कसबा ग्रामकनमडी-
येथें पंतोजीचे जाग्यावर दरमहा १५ रुपयेवर ता० १
एप्रील पासून करण्यांत आला आहे.

५ कसबा सौंदत्ती तालूक परसगड येथील शाळेंतील
शिक्षक डोंगरी बाबा साब यांचा वर्ग मदतनीसचे
जाग्यावर दरमहा १५ रु. पगारावर कसबा संपगांव
तालूक मजकूर या शाळेंत करण्यांत आला. पूर्वी
त्याला पगार ११ रुपये होता, हुषारीमुळें. नेमणु
क ता. १ एप्रिल.

६ कसबा संपगांव तालूक मजकूर शाळेंतील मदत-

नीस यांचावर्ग कसबा सौंदत्ती तालुक परसगड शाळेत शिक्षकीचे जाग्यावर १५ रु. वरकरण्यांत आ ला. पगार सारखाच आहे.

---

२ नवीन शाळा, एप्रिल १८६७ महिन्यापासून झाल्या त्यावर कोणास नेमिलें त्याजबद्दल.

१ कसबा बेळगांव तालूक मजकूर या ठिकाणीं नवीन मराठी शाळा स्थापन करण्यांत आली. त्याजा ग्यावर बेळगांव एथील ॲंग्लो. व. स्कुलांतील मदत नीस माहादाजी रामचंद्र बोडस यांस नेमण्यांत आलें आहे. त्याला पगार पूर्वी १६ असून हालीं १८ रुपये आहे.

२ कसबा धमणगी तालूक बेळगांव एथील नवीन शाळेचे पंतोजीचे जाग्यावर बाळाजी अणाजी शिक्षक वागेवाडी यांजला नेमण्यांत आलें आहे. त्याला पगार पूर्वी ६ रु. असून हालीं १२ रुपये. यानें पूर्वी बदलीपंतोजीचें काम पाहिलें आहे.

३ कसबा अथणी शाळेतील शिक्षक विरुपाक्ष

बिन केंचपा यांस नवीन शाळेवर कसबा आवडुग री येथें पंतोजीचे जाग्यावर दरमहा १२ रु. पगारा वर नेमणूक करण्यांत आली आहे. त्यापूर्वी पगार ८ रु. मिळत असे.

४ आथणी येथील ८ रुपयाचे शिक्षकीचे जाग्यावर अण्णाचारी सत्यबोधाचार्य मेस्त्रार यांस नेम- ण्यांत आलें आहे.

२ बेळगांव जिल्ह्यांत मुलींच्या शाळा सुरू झाल्या. व मु सलमानी शाळा सुरू झाली. त्याजवर कोणाची नेमणुक जाहली. त्याजबद्दल तपशील. तारीख १ एप्रिल सन १८६७ पासून.

१ बागेवाडी तालूक बेळगांव येथील मुलींचे शाळे- वर षडसुर अथ्या नवीन उमेदवार यांची नेम- णूक पंतोजीचे जाग्यावर रु. पगारावर करण्यां त आली आहे.

२ कसबा अथणी येथें दरमहा १६ रु. वर नंतीचा बिन चनबसेश यांस नेमण्यांत आलें आहे. तो इतक्यांत मुलींचे शाळेत नोकरी नव्हती.

कसबा बैलहोंगल येथील पंतोजीचे जाग्यावर सग
षा रावेचा उमेदवार याची नेमणुक दरमहा १६रु॰
वर करण्यांत आली आहे.

४ कसबा किन्नूर येथील पंतोजीचे जाग्यावर त्यांच
स्कुलांतील पंतोजी सातवीर अप्पा रावेच्या यां
स दरमहा १५ रु॰ वर नेमण्यांत आलें आहे.

५ कसबा किन्नूर येथें मुसलमानी शाळेवर नरसन्नुन
हुसेनसाहेब यास दरमहा १६रु॰ वर नेमण्यांत
आलें आहे.

६ कसबा भंडेगारी तालूक बेळगांव ही शाळा बंद-
होऊन पुनः सुरू झाली. त्याजाग्यावर दोडवडप्पा
अप्पाउमेदवार यास दरमहा १२ रु॰ वर नेमण्यां
त आलें आहे.

येणें प्रमाणें वगीवर्गीच नवीन शाळा आणि नवीन नेमणु
का गेल्या एप्रिल महिन्यांत झाल्या. ता॰ १६ मे १८६५

Chanbassapa B. D.

डिप्य॰ इ॰ जिल्हा बेळगांव.

*Natural Philosophy.*

## ಪದಾರ್ಥವಿಜ್ಞಾನ ೨ನೇ ಭಾಗ.

೧ ಪದಾರ್ಥವಿಜ್ಞಾನ ಅಥವಾ ಸೃಷ್ಟಿಶಾಸ್ತ್ರವು ಯಾವತ್ತು
ಸೃಷ್ಟಿಯ ವರ್ಣನೆಯನ್ನು ಸಂಗ್ರಹಿಸುತ್ತದೆ. ಅದು ಸೃಷ್ಟಿ
ಗಳ ಸಾಧಾರಣಾ ಧರ್ಮಗಳನ್ನು ಹೇಳುವದಲ್ಲದೆ ಆ ಪದಾ
ಗಳಲ್ಲಿ ಪರಸ್ಪರವಾಗಿ ನಡೆಯುವ ವ್ಯಾಪಾರಗಳನ್ನು ತಿಳಿ
ತ್ತದೆ. ಈ ಶಾಸ್ತ್ರದ ಸಹಾಯದಿಂದ ಸೃಷ್ಟಿಕ್ರಮಗಳನ್ನು
ತ್ತುಹಚ್ಚಿ, ಅವುಗಳ ಅರ್ಥವನ್ನು ಪ್ರತ್ಯಕ್ಷವಾಗಿ ತಿಳಿಸುವದಕ್ಕೆ
ಕಾರಣಗಳಿಂದ ಕಾರ್ಯಗಳನ್ನು ತೋರಿಸುವದಕ್ಕೂ, ಆ
ವತ್ತು ಪದಾರ್ಥಗಳನ್ನು ಪ್ರತ್ಯಕ್ಷವಾಗಿ ತಿಳಿಸುವ ಸೃಷ್ಟಿ
ಮಗಳನ್ನು ಗೊತ್ತುಹಚ್ಚುವದಕ್ಕೂ ನಾವು ಸಮರ್ಥರಾಗ್ತೇ
ವೆ....

### ಸೃಷ್ಟಿ

ಒಂದು ಅಮರ್ಯಾದವಾದ ಅವಕಾಶವೂ, ಅದರ
ರುವ ವಸ್ತುಗಳೂ ಕೂಡಿ ಸೃಷ್ಟಿಯೆಂದು ಕರೆಯಲ್ಪಡು
ವೆ. ಈ ಸೃಷ್ಟಿಯ ಮರ್ಯಾದೆ ಇಷ್ಟೇ ಎಂದು ಹೇಳು
ದು ಮನುಷ್ಯರಿಂದಾಗದು. ರಾತ್ರಿಯಲ್ಲಿ ಬಹು ಕತ್ತಲು
ವಾಗಿ(ರು) ನಿರ್ಮಲವಾದ ಆಕಾಶದಲ್ಲಿ ನಾವು ನೋಡುವ ನಕ್ಷ

ಧಿ ನಕ್ಷತ್ರಗಳಿಂದ ಆಕ್ರಮಿಸಲ್ಪಟ್ಟ ಅವಕಾಶವು ಸೃಷ್ಟಿಯಲ್ಲಿ ಬಿಂದು ಬಿಂದು ಮಾತ್ರವಾಗಿರುತ್ತದೆ. ಸ್ವಾಭಾವಿಕ ಸೃಷ್ಟಿಯ ಮರ್ಯಾದೆಯ ಅಂಚೆಯಲ್ಲಿರುವಂಥ ಕೋಟ್ಯಾವಧಿ ಸೂರ್ಯರುಗಳೂ, ಗ್ರಹಗಳೂ ದ್ಯುತಿಯ ಆಯಾಮದಿಂದ ಗೊತ್ತುಪಡಿಸಲ್ಪಟ್ಟವೆ.

## ಅವಕಾಶ.

೨ ಅವಕಾಶವೆಂಬುದು ಒಂದು ಅಪ್ರತ್ಯಕ್ಷವಸ್ತುವಾಗಿದೆ. ಸ್ವತಂತ್ರ ಅವಕಾಶವೆಂತಲೂ, ಸಾಪೇಕ್ಷ ಅವಕಾಶವೆಂತ ಅದರಲ್ಲಿ ಎರಡು ವಿಧವು.

ಕೇವಲ ವಿಸ್ತಾರ ಮಾತ್ರಕ್ಕೆ ಸ್ವತಂತ್ರ ಅವಕಾಶವೆಂಬ ಹೆಸರು. ಇದಕ್ಕೆ ಮರ್ಯಾದೆಗಳಿಲ್ಲ. ಅದರಲ್ಲಿ ಯಾವದೊಂದು ಗುಣಾವಿಶೇಷವಿಲ್ಲ. ಅದರ ಗುಣವೆಂದು ತಿಳಿಯುತಕ್ಕದ್ದು.

೩ ಸಾಪೇಕ್ಷ ಅವಕಾಶದ ಎರಡು ಭಾಗಗಳು ಬೇರೆ ಬೇರೆ ವಸ್ತುಗಳಿಂದ ಆಕ್ರಮಿಸಲ್ಪಟ್ಟು ಪರಸ್ಪರವಾಗಿ ಸಂಬಂಧಿಸಿದರೆ ಅವುಗಳಿಗೆ ಸಾಪೇಕ್ಷ ಅವಕಾಶವೆಂಬ ಹೆಸರು.

## ವಸ್ತು.

೪ ಇಂದ್ರಿಯಗಳಿಗೆ ಪ್ರತ್ಯಕ್ಷವಾಗಿ, ಅಥವಾ ಪರಂಪರಾ ಸಂಬಂಧದಿಂದ ಗೋಚರವಾಗುವಂಥದು ವಸ್ತುವಿಷ್ಟ

ಪದಾರ್ಥಗಳೇ ವಸ್ತುಗಳೆಂದೆನಿಸಿಕೊಳ್ಳುತ್ತವೆ.

೭ ಪರಮಾಣುವೆಂಬ ಅತಿಸೂಕ್ಷ್ಮಕಣಗಳು ಒಂದು ನಿಯಮಿತವಾದ ಆಕಾರವುಳ್ಳವಾಗಿ ಒಂದರೊಡನೊಂದು ಕೂಡಿ ವಸ್ತುಗಳಾಗಿರುತ್ತವೆ.

೮ ಕಲ್ಲು ಕಬ್ಬಿಣ ಮೊದಲಾದವುಗಳಂಥ ಕೆಲವು ಪದಾರ್ಥಗಳು ದೃಢವಸ್ತುಗಳಾಗಿರುತ್ತವೆ. ಅವುಗಳ ದೃಢತ್ವವು ಪ್ರಾಕೃತವ ಸ್ಥಾನವನ್ನು ಗನಿಂದ ಹೊರಗಿನವರೆಗೆ ಕುಡಸಲ್ಕೆನೆಂದಿಸಿರುತ್ತದೆ. ಉಳಿದ ಪದಾರ್ಥಗಳು ಯಾವಾಗಲೂ ಅಸ್ಥಿರವಾಗಿರುತ್ತವೆ. ಅವುಗಳ ಅಸ್ಥಿರತ್ವವು ಬೇರೆ ಪದಾರ್ಥಗಳ ಮೇಲೆ ನಡೆಯುವ ಅವುಗಳ ವ್ಯಾಪಾರದಿಂದ ಮಾತ್ರ ತಿಳಿಯುತ್ತದೆ. ಹವೆಯು ಈ ವಿಧದ ವಸ್ತುವಾಗಿರುತ್ತದೆ. ಇದು ಕೇವಲ ಅದೃಶ್ಯವಾಗಿದ್ದಾಗ್ಯೂ ಅತಿಕಠಿಣವಾದದ್ದರ ವಸ್ತುತ್ವವು ಎಷ್ಟು ಸಂಭವಿಸುತ್ತದೋ ಅಷ್ಟೇ ಇದರಲ್ಲಿ ಸಂಭವಿಸುತ್ತದೆ.

೯ ಯಾವ ಶಕ್ತಿಯಿಂದ ಪರಮಾಣುಗಳು ಒಂದರೊಂದು ಕೂಡಿ ವಸ್ತುಗಳಾಗಿರುತ್ತವೆಯೋ, ಅದು ಆಕರ್ಷಣವೆಂದು ಕರೆಯಲ್ಪಡುತ್ತದೆ. ಈ ಶಕ್ತಿಯು ಸೃಷ್ಟಿಯೊಳಗೆಲ್ಲ ವ್ಯಾಪ್ತವಾಗಿದೆ. ಆದರೂ ಕೆಲವು ಪದಾರ್ಥಗಳು ಬೇರೆ ವಿಶೇಷಗುಣಗಳ ಮೂಲಕವಾಗಿ ಪ್ರತ್ಯಾಕರ್ಷಣವೆಂಬ ಗುಣವುಳ್ಳವುಗ

ಘ್ರಾಣಿಸಿ. ಪ್ರತ್ಯೇಕಿಸಿ ನೋಡುವ ವಸ್ತುಗಳನ್ನು ಪರೀಕ್ಷಿಸಿ
ವರ್ತಿಸುವರು. ಆದರೆ ಇಲ್ಲಿ ನಮ್ಮ ಲಕ್ಷ್ಯವೇನೆಂ
ದರೆ, ಎಲ್ಲ ಪದಾರ್ಥಗಳು ಉಷ್ಣತೆಯ ಪ್ರಭಾವದಿಂ
ದ ಒಂದರಿಂದೊಂದು ರೂಪಾಗುತ್ತವೆ.

೧೦ ಈ ಪ್ರಕಾರವಾಗಿ ಪ್ರಕೃತಿಯಲ್ಲಿ, ಇರುವ ಎಲ್ಲ ವಸ್ತು ಪದಾರ್ಥಗಳೂ ಅತಿಸೂಕ್ಷ್ಮವೂ, ಅವಿಭಾಜ್ಯವೂ (ವಿಭಜಿಸಲಾಗದಂಥ) ಆದ ಪರಮಾಣುಗಳಿಂದಾಗಿರುತ್ತವೆ; ಈ ಪದಾರ್ಥಗಳು ಸೃಷ್ಟಿಯಲ್ಲಿ ನಿಸರ್ಗದಿಂದ ಉತ್ಪನ್ನವಾದವುಗಳೇ ಆಗಲಿ, ಅಥವಾ ಮನುಷ್ಯನು ಮಾಡಿದವೇ ಆಗಲಿ. ಆ ಪರಮಾಣುಗಳು ಪರಸ್ಪರ ಆಕರ್ಷಣದಿಂದ ಒಂದಕ್ಕೊಂದು ಅಂಟಿಕೊಂಡು ಬೇರೆ ಬೇರೆ ಆಕಾರವೂ ಗುಣಧರ್ಮವೂ ಉಳ್ಳ ವಸ್ತುಗಳಾಗಿರುತ್ತವೆ.

೧೧ ಈ ಪರಮಾಣುಗಳು ತಮ್ಮಲ್ಲಿರುವ ಉಷ್ಣತೆಯ ಪ್ರಮಾಣದಿಂದ ವಸ್ತುಗಳ ರೂಪ ಹೊಂದಿರುತ್ತವೆ. ಆದದರಿಂದ ಆ ವಸ್ತುಗಳಲ್ಲಿ ಸಾಧಾರಣವಾಗಿ ೩ ಪ್ರಕಾರಗಳಾಗಿರುತ್ತವೆ. ಅವು ಯಾವವೆಂದರೆ, ಅಪ್ರವಾಹಿ, ಪ್ರವಾಹಿ, ವಾಯುರೂಪಿ. ಕಲ್ಲು ಅಪ್ರವಾಹಿ, ನೀರು ಪ್ರವಾಹಿ, ಹವೆ ವಾಯುರೂಪಿ. ಅಪ್ರವಾಹಿಗಳಲ್ಲಿ ಪರಮಾಣುಗಳು ತಮ್ಮ ಸ್ಥಳಬಿಟ್ಟು ಅಲ್ಲಾಡದ

ಹಾಗೆ ಒಂದನ್ನೊಂದು ಕೂಡಿಕೊಂಡಿರುತ್ತವೆ. ಪ್ರವಾಹಿಗಳಲ್ಲಿ ಅವು ತಮ್ಮ ತಮ್ಮೊಳಗೆ ಒಂದರಮೇಲೊಂದು ಅಡ್ಡಿಯಿಲ್ಲದೆ ತಿರುಗುತ್ತವೆ. ಆದರೆ ವಾಯುಘನಗಳಲ್ಲಿ ಅವು ಒಂದನ್ನೊಂದು ಅಗಲಿ ದೂರಾಗಿರುತ್ತವೆ.

೨) ಆಕರ್ಷಣದಲ್ಲಿಯೂ, ಪ್ರೋತ್ಸಾರಣದಲ್ಲಿಯೂ ಕೆಲತರದ ಹೆಚ್ಚುಕಡಿಮೆಗಳಾಗುವದರಿಂದ ವಸ್ತುಗಳ ಸ್ಥಿತಿಯಲ್ಲಿ ಅನೇಕ ಒಳಭೇದಗಳುಂಟಾಗಿರುತ್ತವೆ. ಅವು ಯಾವವೆಂದರೆ, ಸಛಿದ್ರ, ಘನ, ಕಠಿಣ, ಸ್ಥಿತಿಸ್ಥಾಪಕ, (ಮಣಿಯುವಂಥಾದು), ನಿಃಸತ್ವ (ಹಿಂಡಿಯಂಥಾದು), ಘನವರ್ಧನೀಯ (ಸುತ್ತಿಗೆಯಿಂದ ಬಡಿದರೆ ಹಿಗ್ಗುವಂಥಾದು), ತಾಂತ್ರಿಕ (ತಂತಿಯಾಗಿ ಎಳೆಯಲಿಕ್ಕೆ ಬರುವಂಥಾದು), ಜಿಗಟು.

ಈ ಮೇಲೆ ಹೇಳಿರುವ ಪದಾರ್ಥಗಳೂ, ಪ್ರಕಾರಗಳೂ ಸಾಧಾರಣವಾಗಿ ನಿರ್ಜೀವಗಳಿಗೆ ಸಂಬಂಧವಾಗಿರುತ್ತವೆ. ಆದರೆ ವಸ್ತುವಿನಲ್ಲಿ ಸಜೀವತ್ವಸಹವುಂಟು. ಸಜೀವತ್ವವೆಂದರೆ ಇಂದ್ರಿಯಯುಕ್ತತ್ವವು. ಕೆಲಪದಾರ್ಥಗಳಿಗೆ ಇಂದ್ರಿಯಗಳುಂಟು. ಆ ಇಂದ್ರಿಯಗಳ ದ್ವಾರದಿಂದ ಪ್ರಾಣಿಕೋಟಿಯಲ್ಲಿಯೂ, ವನಸ್ಪತಿಕೋಟಿಯಲ್ಲಿಯೂ ಪ್ರಾಣಧಾರಣೆಕ್ಕೆ ಅವಶ್ಯಕವಾದ ಕೃತ್ಯಗಳು ನಡೆಯುತ್ತವೆ.

*Historical Extracts*

# ಐತಿಹಾಸಿಕ ಸಂಗತಿಗಳು.

ಅಲ್ಕೆಮಿ, ಅಥವಾ ಕಿಮಿಯಾ ಎಂದು ಕರೆಯಲ್ಪಡುತ್ತಿರುವ ಚಿನ್ನವನ್ನು ಹುಟ್ಟಿಸುವ ವಿದ್ಯೆ- ಜನರು ಹೇಳುವ ಪುರಾಣ ಅಥವಾ ಐತಿಹ್ಯ ಕಥೆಗಳನ್ನು ನಂಬುವದಾದರೆ ಈ ವಿದ್ಯೆಯು ಬಹು ಪ್ರಾಚೀನ ಕಾಲದಿಂದಲೂ ಬಂದಿರುತ್ತದೆಂದು ಹೇಳಬಹುದು. ಆದರೆ ರೋಮರನ ಕಾಲದಿಂದ ಕ್ರಿ.ಶ. ೧೪೦೦ ವರ್ಷಗಳವರೆಗೂ ಪಂಡಿತ-ಜನಗಳಲ್ಲಿಯೂ, ಕವಿಗಳಲ್ಲಿಯೂ, ಶ್ರೀಮಂತರಲ್ಲಿಯೂ ಬಹು-ಸಂಖ್ಯಾಜನರು ಮಾತ್ರ ಈ ವಿದ್ಯೆಯನ್ನು ಕುರಿತು ಬರೆದಿದ್ದಾರೆ. ಪ್ಲಿನಿ ಎಂಬ ಇತಿಹಾಸಕರ್ತನು ಹೇಳುವದೇನಂದರೆ, ರೋಮ ಪಟ್ಟದ ಅರಸನಾದ ಕಾಲಿಗಲಾ ಎಂಬುವನು ಸಂಬಳಖಾರದಿಂದ ಬಂಗಾರವನ್ನು ಉತ್ಪನ್ನಮಾಡುವದಕ್ಕೋಸ್ಕರ ಆಹಾರ-ವನ್ನು ಮೊದಲಿಗೆ ಗೊತ್ತುಪಡಿಸಿ ತಯಾರು ಮಾಡಿಸಿದವನಂತೆ. ಆದರೆ ಅದರಿಂದಲುಂಟಾಗುವ ಲಾಭಕ್ಕಿಂತ ಖರ್ಚು ಹೆಚ್ಚಾದದ್ದರಿಂದ ಅದನ್ನು ಬಿಟ್ಟುಬಿಟ್ಟನು. ಈಜಿಪ್ತ ದೇಶದಲ್ಲಿ ಮೊದಲಿಗೆ-ಈ ವಿದ್ಯೆಯು ಹುಟ್ಟಿತೆಂದು ಕೆಲವರು ಹೇಳುತ್ತಾರೆ. ಈ ಕೃತಿಯನ್ನು ಮೊದಲು ಗೊತ್ತುಪಡಿಸಿದವರು ಅರಬಸ್ಥಾನದವರಂತೆ. ಇಂಗ್ಲಂಡದಲ್ಲಿ ೬ನೇ ಹೆನ್ರಿ ಪಟ್ಟಸ್ಥನಾದ ಪಾಶ್ಚಾತ್ಯ ... ಎಂಬ

ವನು ಉಕ್ರೈನಿಯನ್ನು ನಡಿಸಿರುವಾಗ ತನಗಾದ ಅನುಭವ
ಗಳನ್ನೆಲ್ಲಾ ಪ್ರಕಟಿಸಿದನು. ಅವನು ತಾನು ಮಾಡಿದ ಟಿ
ದೂರಿಯನ್ನೆಲ್ಲ ಕಪ್ಪುಬಣ್ಣ ತಂದುಕೊಟ್ಟಿಸಿ, ಅದ
ಒಂದು ಕೆಂಪದೂ, ಬಿಳಿದೂ ಅಂದವಾಡಿಯಿಂದ ಮಾ
ನೆಂದು ಹೇಳಿದನು. ಆದರೆ ಅವನು ಕಾಯಲ್ ಸೋಸೈ
ಟಿಯೆಂಬ ಸಮಾಜದವರೆಲ್ಲಿ ಬಿಟ್ಟಿದ್ದರಿಂದ ಆ ಸಮಾ
ಜದವರು ಉಕ್ರೈನಿಯನ್ನು ತಪ್ಪುದಾರಿಯಲ್ಲಿ ಮಾಡಿತ್ತೋರಿ
ದೀತು, ಇಲ್ಲದಿದ್ದರೆ ಗಡಿಪಾರ ಮಾಡಬೇಕಾದೀತು, ಎಂದ
ಅವನಿಗೆ ಬಲಾತ್ಕಾರ ಮಾಡಿದ್ದರಿಂದ ಅವನು ವಿಷ ತಿಂದು
ಸತ್ತನು. ೧೭೮೩.

---

ಅಲ್‌ಕುರಾನ್, ಅಂದರೆ ಮುಸಲ್ಮಾನ ಧರ್ಮಸ್ಥಾಪಕನಾದ
ಮಹಮ್ಮದನಿಂದ ಬರೆಯಲ್ಪಟ್ಟ ಕುರಾನವು. ಕ್ರಿ. ಶ. ೬೧
೦ ವರ್ಷದ ಸುಮಾರಿಗೆ ಬರೆಯಲ್ಪಟ್ಟಿತು. ಇದು ಬಹು
ಸರಸಾದ ಅರಬ್ಬಿ ಭಾಷೆಯಿಂದ ಬರೆದಿರುತ್ತದೆ. ಮುಸಲ್ಮಾನರ
(ಸಾವುನಮ್ಮನೆಂದರೆ ಗೃಹಾಣಿ) ಈ ಪುಸ್ತಕವು ದೇವರಿಂದ
ಸಂಪಾದಿಸಲ್ಪಟ್ಟಿತೆಂದು ಹೇಳುತ್ತಾರೆ. ಗಾಬ್ರಿಯಲ್ ಎಂ
ದೇವದೂತನು ಇದನ್ನು ಮಹಮ್ಮದನಿಗೆ ತಂದು ಕೊಟ್ಟನ

ಏಲ್‌ಸೈನ (ಪ್ರಾಕ್ಸಾರಸ) ಎಂಬ ಮಧ್ಯಗ್ರೀಕ ಜನರ ದೇವತೆಗಳಲ್ಲಿ ಒಬ್ಬನಾದ ಟಾಕನೆ ಎಂಬವನಿಂದ ತಯಾರು ಮಾಡಲ್ಪಟ್ಟವೆಂದು ಕಥೆಯುಂಟು.

---

ಅಲೆಗ್ಝಾಂಡ್ರಿಯಾ - ಇದರ ಕೋಟೆಯು ಅಲೆಗ್ಝಾಂಡರ ದಿ ಗ್ರೇಟ ಎಂಬ ಗ್ರೀಕ ದೇಶದ ಬಾದಶಹನಾದ ಅರಸನಿಂದ ಕ್ರಿಸ್ತಪೂರ್ವ ೩೩೨ನೇ ವರ್ಷದಲ್ಲಿ ಕಟ್ಟಲ್ಪಟ್ಟಿತು. ಇದರ ಸುತ್ತಳತೆ ೧೫ ಮೈಲು. ಈ ಪಟ್ಟಣವನ್ನು ಜುಲೈಯಸ್ ಸೀಝರ್ ಎಂಬ ರೋಮ ಪಟ್ಟದ ದೊರೆಯು ಕ್ರಿ.ಶ.ಕ್ಕೆ ಮುಂಚೆ ೪೮ನೇ ವರ್ಷದಲ್ಲಿ ಜಯಿಸಿ, ಇದರಲ್ಲಿರುವ ಇಜಿಪ್ತ ದೇಶದ ಅರಸರುಗಳು ಬಹು ದೊಡ್ಡದಾದ ಪುಸ್ತಕಾಲಯದಲ್ಲಿರುವ ೪೦೦೦೦೦ಕ್ಕೆ ಮೇಲ್ಪಟ್ಟ ಪುಸ್ತಕಗಳನ್ನು ಸುಟ್ಟನು. ಪುನಃ ೬೪೦ನೇ ವರ್ಷದಲ್ಲಿ ಸಾರಾಸೀನ್ ಎಂಬ ಜನಾಂಗದವರು ಈ ಪಟ್ಟಣವನ್ನು ವಶಮಾಡಿಕೊಂಡು ಇದರಲ್ಲಿರುವ ೨ನೇ ಪುಸ್ತಕಾಲಯದೊಳಗಿನ ೭೦೦೦೦೦ ಪುಸ್ತಕಗಳನ್ನು ಸುಟ್ಟು ೬ ತಿಂಗಳವರೆಗೆ ಸ್ನಾನಕ್ಕೆ ನೀರು ಕಾಯಿಸಿಕೊಳ್ಳುತ್ತಿದ್ದರು. ಈ ೧೧೦೦೦೦೦ ಪುಸ್ತಕಗಳು ಹೋದದ್ದು ಜಗತ್ತಿನ ಸುಧಾರಣೆಯಲ್ಲಿ ಬಹು ದುಃಖಕರವಾದ ಸಂಗತಿ ಎಂದು ತಿಳಿಯ

ಟಿಪ್ಪಣಿ.

ಆಲ್‌ಜೀಬ್ರಾ, ಅಂದರೆ ಬೀಜಗಣಿತ - ಈ ಗಣಿತವು ಮೊ
ದಲು ಅರಬ್ಬರಿಗೆ ಹಿಂದುಸ್ಥಾನದಿಂದ ಗೊತ್ತಾಯಿತು. ಮಹ
ಮ್ಮದ್ ಬಿನ್ ಮೂಸಾ ಎಂಬುವನು ಸಂಸ್ಕೃತದಲ್ಲಿದ್ದ ಬೀಜ
ಗಣಿತಗ್ರಂಥವನ್ನು ಬರೆದನು. ಅವನೇ ಈ ಗಣಿತವನ್ನು
ಉತ್ಪತ್ತಿ ಮಾಡಿದನೆಂದು ಕೆಲವರು ತಿಳಿಯುತ್ತಾರೆ. ಸಾವಿರದ ನೂ
ರೈವತ್ತರಲ್ಲಿ ಯುರೋಪಿನ ಜನರು ಸ್ಪೇನ ದೇಶದಲ್ಲಿ ಅರಬ್ಬರಿಂದ
ಕಲಿತರು. ವಿಯೆಟ್ ಎಂಬುವನು ಮೊದಲು ಬೀಜಗಣಿತ
ದಲ್ಲಿ ಸಂಖ್ಯೆಗಳ ಬದಲಾಗಿ ಅಕ್ಷರಗಳನ್ನುಪಯೋಗಿಸಿದನು. ಫ್ರಾನ್ಸ್ ದೇಶ
ದ ವಿಯೆಟ್ ಎಂಬುವನು ಸಂಖ್ಯೆಗಳಿಗೆ ಬದಲಾಗಿ ಅಕ್ಷರಗಳನ್ನು ಉಪಯೋ
ಗಿಸಿದನು ೧೫೯೦

ಲಾಗರಿತಂ, ಅಂದರೆ ಘಾತಾಂಕ - ಸ್ಕಾಟ್‌ಲೆಂಡ್ ದೇಶದ
ನೇಪಿಯರ್ ಎಂಬುವನು ಘಾತಾಂಕ ಕೋಷ್ಟಕಗಳನ್ನು ಬರೆ
ದಿದ್ದನು. ಗುಣಾಕಾರ ಭಾಗಾಕಾರಾದಿಗಳ ಲೆಕ್ಕ
ಗಳನ್ನು ಸುಲಭವಾಗಿ ಮಾಡುವ ಉಪಾಯ ಕಂಡುಹಿಡಿ
